(ಅನುಬಂಧ–6)

(ii) ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, "2009ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು" ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಸುಮಾರು 3--5 ಲಕ್ಷ ವ್ಯಕ್ತಿಗಳು ಈಗಾಗಲೇ ಅನೌಪಚಾರಿಕವಾಗಿ ನಿವೇಶನಗಳನ್ನು ಖರೀದಿ ಮಾಡಿ ನೋಂದಣಿ ಇಲ್ಲದೆಯೇ ವಾಸದ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದಾರೆ. ಸಾಮಾನ್ಯ ಜನರಿಗೆ, ಅದರಲ್ಲೂ ಕಡಿಮೆ ವಿಸ್ತೀರ್ಣದ ಮನೆ ಕಟ್ಟಿಕೊಂಡು ವಾದ ಮಾಡುತ್ತಿರುವ ಬಡ ಜನರಿಗೆ ಬಹಳಷ್ಟು ತೊಂದರೆ ಉಂಟಾಗಿರುವುದನ್ನು ಸರ್ಕಾರ ಮನಕೊಂಡು ಈ ತಿದ್ದುಪಡಿ ವಿಧೇಯಕವನ್ನು ಇಂದು ತಂದಿದೆ.

ಇದರ ಜೊತೆಗೆ ಮುಖ್ಯವಾಗಿ ಬೇಸಾಯದ ಬಳಕೆಗಾಗಿ ತೆರಿಗೆ ನಿರ್ಧರಿಸಲಾದ ಅಥವಾ ಹಿಡುವಳಿ ಹೊಂದಿರುವ ಭೂಮಿಯ ಯಾವುದೇ ಅಧಿಭೋಗದಾರನು ಕರ್ನಾಟಕ ಭೂ ಕಂದಾಯ ಅಧಿನಿಯಮ 2009ರ ಪ್ರಾರಂಭದ ದಿನಾಂಕಕ್ಕೆ ಮೊದಲು ಜಿಲ್ಲಾಧಿಕಾರಿ ಅನುಮತಿ ಪಡೆಯದೇ ಆ ಭೂಮಿಯನ್ನು ಅಥವಾ ಅದರ ಒಂದು ಭಾಗವನ್ನು ನಿವಾಸದ ಉದ್ದೇಶಕ್ಕೆ ಬಳಸಿಕೊಂಡಿರುವ ಸಂದರ್ಭದಲ್ಲಿ ಅಂಥ ಬದಲಿ ಉಪಯೋಗವನ್ನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಬಹುದಾಗಿದೆ. ಇಂಥ ಭೂಮಿಯನ್ನು ಸಕ್ರಮ ಗೊಳಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ವಿರುತ್ತದೆ. ಇದು ಒಂದು ಸಲದ ಸಮಗ್ರ ಸಕ್ರಮೀಕರಣ ಯೋಜನೆ ಯಾಗಿದ್ದು ಸಕ್ರಮಗೊಳಿಸಲು ನಿಗದಿಪಡಿಸಿದ ದಿನಾಂಕದಿಂದ ಅಂದರೆ ಈ ತಿದ್ದುಪಡಿ ಪ್ರಾರಂಭದ ಒಂದು ವರ್ಷದ ಅವಧಿಯೊಳಗೆ ನೇಮಿಸಬಹು ದಾದಂಥ ನಮೂನೆಯಲ್ಲಿ ಶುಲ್ಕ ಮತ್ತು ದಂಡದೊಡನೆ ಜಿಲ್ಲಾಧಿಕಾರಿ ಯವರಿಗೆ ಅರ್ಜಿ ಸಲ್ಲಿಸಬಹುದು. ಈ ಅಧಿನಿಯಮದಲ್ಲಿ ಏನೇ ಇದ್ದರೂ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ

ಒಳಪಟ್ಟು ಮತ್ತು ನಿಯಮಿಸಲಾದಂಥ ಷರತ್ತುಗಳಿ ಗೊಳಪಟ್ಟು ಸೂಕ್ತ ವಿಚಾರಣೆ ನಡೆಸಿ ಸಕ್ರಮಗೊಳಿಸಬಹದು ಎನ್ನುವ ವಿಚಾರ ಇದೆ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ದಿನಾಂಕ: 31-12-2008ಕ್ಕಿಂತ ಮುಂಚೆ ಅನಧಿಕೃತ ಕಂದಾಯ ನಿವೇಶನಗಳು ಮತ್ತು ಭೂಪರಿವರ್ತನೆಯಾಗದೇ ಅಭಿವೃದ್ಧಿಯಾದ ಬಡಾವಣೆಗಳಲ್ಲಿನ ನಿವೇಶನಗಳನ್ನು ಷರತ್ತುಗಳಿಗೊಳಪಟ್ಟು ಸಕ್ರಮ ಗೊಳಿಸುವುದು. ಇದಕ್ಕೆ ಸುಮಾರು 15 ವಿಚಾರಗಳನ್ನು ಇಟ್ಟಿದ್ದೇವೆ. ಯಾವ ವಿಚಾರದಲ್ಲಿ ಇದು ಸಕ್ರಮಗೊಳಿಸಲಿಕ್ಕೆ ಆಗಿಲ್ಲವೆಂದರೆ, ನೈಸರ್ಗಿಕ ನೀರುಗಾಲುವೆಗಳು, ಅಥವಾ ಕಣಿವೆ ಹಾದಿಗೆ ಅಡ್ಡಲಾಗಿ ಇದ್ದಾಗ, ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರವು ಮಾಲೀಕತ್ವ ಅಥವಾ ನಿಯಂತ್ರಣ ಹೊಂದಿರುವ ಒಂದು ಪ್ರಾಧಿಕಾರಕ್ಕೆ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದಾಗ, ಪ್ರಸ್ತುತ ಇರುವ ಅಥವಾ ಉದ್ದೇಶಿತ ರಸ್ತೆಗಳು, ಒಳ ಅಥವಾ ಹೊರ ವರ್ತುಲ ರಸ್ತೆಗಳ ರಾಷ್ಟ್ರೀಯ ಹೆದ್ದಾರಿಗಳು, ವರ್ತುಲ ರಸ್ತೆಗಳ ಮೇಲೆನ ಬೈಪಾಸುಗಳೂ ಸೇರಿದಂತೆ ರಸ್ತೆಗಳ ಅಗಲೀಕರಣಕ್ಕೆ ಪ್ರಸ್ತಾಪಿಸಲಾದ ಭೂಮಿ ಅಥವಾ ರೈಲ್ವೆ ಲೈನ್‌ಗಳು, ಟ್ರಾಮ್‌ವೇಗಳು, ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ ಯೋಜನೆಗಳು, ಸಂಪರ್ಕಗಳು ಮತ್ತಿತರ ನಾಗರೀಕ ಸೌಲಭ್ಯಗಳು ಅಥವಾ ಸಾರ್ವಜನಿಕ ಸೌಲಭ್ಯಗಳಿಗೆ ಅಡ್ಡಲಾಗಿ ಬರುತ್ತಿದ್ದಾಗ, ಅರಣ್ಯ ಭೂಮಿಯಾಗಿದ್ದಾಗ ಮತ್ತು ಬೇರೊಬ್ಬ ವ್ಯಕ್ತಿಗೆ ಸೇರಿದ್ದು, ಅರ್ಜಿದಾರನು ಅದರ ಮೇಲೆ ಯಾವುದೇ ಹಕ್ಕನ್ನು ಹೊಂದಿರ ದಿದ್ದಾಗ, ಅದನ್ನು ಉದ್ಯಾನವನಗಳು, ಆಟದ ಮೈದಾನಗಳು, ಬಯಲು ಜಾಗವಾಗಿ ಅಥವಾ ಯಾವುದೇ ನಾಗರೀಕ ಸೌಲಭ್ಯಗಳನ್ನು ಒದಗಿಸುವು ದಕ್ಕಾಗಿ ಮೀಸಲಿರಿಸಿದ್ದಾಗ, ಅಥವಾ ಕಟ್ಟಡವು ನೆರೆಯವರ ಸ್ವತ್ತಿಗೆ, ಮಳೆ ನೀರಿನ ಚರಂಡಿಗಳು, ಕೆರೆ ಅಂಗಳಗಳು, ನದಿಯ ಪಾತ್ರಗಳು, ಅಥವಾ ನದಿ ತಳಗಳು ಹಾಗೂ ಕಾಲುವೆಗಳಿಗೆ ಒತ್ತಿಕೊಂಡಿದ್ದಾಗ ಅಥವಾ ಹೈಟೆನ್ಷನ್ ವಿದ್ಯುತ್ ಲೈನುಗಳ ಅಡಿಯಲ್ಲಿ ಬರುತ್ತಿದ್ದಾಗ, ಪಾರಂಪರಿಕ ಸ್ಮಾರಕಗಳು, ವಿಮಾನ ನಿಲ್ದಾಣಗಳು ಅಥವಾ ರಕ್ಷಣಾ ನಿಯಮಗಳ ವಲಯ ವಿನಿಮಯಗಳಲ್ಲಿ ನಿರ್ದಿಷ್ಟಪಡಿಸಿದ ಎತ್ತರಗಳ ನಿರ್ಬಂಧಗಳಿಗೆ ವಿರುದ್ಧವಾಗಿ ಅದರ ಬಳಕೆ ಇದ್ದಾಗ, ಹೈಟೆನ್ಷನ್ ಲೈನುಗಳಿಂದ ಎಷ್ಟು ದೂರ ಇರಬೇಕು ಎಂಬ ನಿರ್ಬಂಧಕ್ಕೆ ಅಥವಾ ಅಗ್ನಿ

ಆಕಸ್ಮಿಕ ರಕ್ಷಣಾ ಕ್ರಮಗಳಿಗೆ ಅನುಗುಣವಾಗಿ ಇರದಿದ್ದಾಗ, ಭಾತರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಕರಾವಳಿ ವಲಯ ನಿಯಮಗಳ ಪ್ರದೇಶದೊಳಗಡೆ ಇದ್ದಾಗ, ಅಥವಾ ಅಭಿವೃದ್ಧಿಯು ಸರಿಹೊಂದದ ವಲಯದಲ್ಲಿ ಇದ್ದು ವಿಶೇಷ ಅಥವಾ ಅನಿಯಮಿತ ಕೈಗಾರಿಕೆಯಾಗಿದ್ದು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಕೆಂಪು ಪಟ್ಟಿಯಲ್ಲಿ ಪ್ರವರ್ಗಿಸಿದ ಕೈಗಾರಿಕೆಯಾಗಿದ್ದಾಗ ಸರಿ ಹೊಂದುವ ವಲಯದೊಳಗೆ ಇದ್ದರೂ ಸಹ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಯಿಂದ ಅನುಮತಿಯೊಂದಿಗೆ ಮಾತ್ರ ಅದನ್ನು ಸಕ್ರಮಗೊಳಿಸತಕ್ಕದ್ದು, ಭೂಮಿಯ ಬಳಕೆಯ ವಿಧಾನವನ್ನು ಬದಲಾಯಿ ಸಿರುವ ಸಂಬಂಧದಲ್ಲಿ ಅಕ್ರಮ–ಸಕ್ರಮಗೊಳಿಸುವುದನ್ನು ಕರ್ನಾಟಕ ನಗರ, ಪಟ್ಟಣ ಯೋಜನೆಗಳ ಅಧಿನಿಯಮ 1961, 14ಎ ಪ್ರಕರಣದ ಅನುಸಾರವಾಗಿ ಸಕ್ರಮಗೊಳಿಸತಕ್ಕದ್ದು, ಅಥವಾ ಎರಡಕ್ಕಿಂತ ಹೆಚ್ಚು ಮಹಡಿಗಳನ್ನು ಹೊಂದಿರುವ ಯಾವುದೇ ಕಟ್ಟಡದ ಸಂಬಂಧದಲ್ಲಿ ಅಭಿವೃದ್ಧಿಯನ್ನು–(ಎ) ಅಂಥ ಕಟ್ಟಡ ಗಟ್ಟಿಯಾಗಿದೆ ಎಂಬ ಬಗ್ಗೆ ರಚನಾ ಅಭಿಯಂತರರು ನೀಡಿದ ಪ್ರಮಾಣ ಪತ್ರವನ್ನು ಮಂಡಿಸಿದ(ಬಿ) ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಷಣ ಪ್ರಮಾಣ ಪತ್ರವನ್ನು ಮಂಡಿಸಿದ, ಹೊರತು ಸಕ್ರಮಗೊಳಿ ಸತಕ್ಕದ್ದಲ್ಲ., ಅಥವಾ ಅನುಮೋದಿತ ಮಾಸ್ಟರ್ ಪ್ಲಾನಿನ ಕೃಷಿ ವಲಯದಲ್ಲಿ ಅಥವಾ ಕರ್ನಾಟಕ ಭೂ ಕಂದಾಯ ಅಧಿನಿಯಮ, 1974ರ ಅಡಿಯಲ್ಲಿ ಹಸಿರು ಪ್ರದೇಶ ಎಂದು ಘೋಷಿಸಿದ ಪ್ರದೇಶದಲ್ಲಿ ಅಕ್ರಮವಾಗಿ ಮಾಡಿದ ಅಭಿವೃದ್ಧಿ ಅಥವಾ ರಚನೆಯಾಗಿದ್ದಾಗ, ಹಾಗೂ ನಿಯಮಿಸಲಾದ ಯಾವುದೇ ಇತರ ನಿಷೇಧಗಳಲ್ಲಿ ಅದು ಒಳಗೊಂಡಿದ್ದಾಗ, ಹೊರತುಪಡಿಸಿ ಅದನ್ನು ಸಕ್ರಮ ಗೊಳಿಸಬಹುದು ಅಥವಾ ಸಕ್ರಮಗೊಳಿಸಲು ನಿರಾಕರಿಸ ಬಹುದು, ಎನ್ನುವ ಉದ್ದೇಶದಿಂದ ಸುಮಾರು 3 ರಿಂದ 5 ಲಕ್ಷ ಸಾಮಾನ್ಯ ವರ್ಗದವರು, ಬಡಜನರಿಗೆ ಅನುಕೂಲವಾಗಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಈ ವಿಧೇಯಕದ ಉದ್ದೇಶ, 31–12–2008 ಕ್ಕಿಂತ ಮೊದಲು ಯಾರ್‍ಯಾರು ಬಡವರು, ಅಮಾಯಕ ಜನ ರೆವಿನ್ಯೂ ಭೂಮಿಯ ಮೇಲೆ ಮನೆ ಕಟ್ಟಿದ್ದಾರೆ, ಅಥವಾ ಕನ್‌ವರ್ಷನ್ ಮಾಡಿಸಿಕೊಳ್ಳದೇ ಮನೆ ಕಟ್ಟಿದ್ದಾರೆ, ಇಂಥ ಜಮೀನುಗಳಲ್ಲಿ ಯಾರು ಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ, ಇವುಗಳನ್ನು

ಸಕ್ರಮ ಮಾಡುವ ಸಲುವಾಗಿ, ಅಕ್ರಮ ಸಕ್ರಮ, ಅಕ್ರಮವಾಗಿರುವುದನ್ನು ಸಕ್ರಮಗೊಳಿಸುವುದಕ್ಕಾಗಿ ಈ ವಿಧೇಯಕ ತಂದಿದ್ದೇವೆಂದು ಹೇಳಿದಿರಿ. ತಮಗೆ ನನ್ನ ಮೊದಲು ಕ್ಲಾರಿಫೀಕೇಷನ್ ಏನೆಂದರೆ, ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡನಗರ, ಇಂಥ ಪಟ್ಟಣಗಳ ಸುತ್ತಮುತ್ತ ಎಷ್ಟು ಭೂಮಿ ಈ ತರಹದಲ್ಲಿ ರೆವಿನ್ಯು ಭೂಮಿಯಲ್ಲಿ ಮನೆ ಕಟ್ಟಿದ್ದಾರೆ ಎನ್ನುವ ಬಗ್ಗೆ ಸರ್ವೇ ಮಾಡಿಸಿದ್ದೀರಾ? ನಿಮ್ಮ ಹತ್ತಿರ ಈ ತರಹದ ಫಿಗರ್ಸ್ ಇದೆಯೆ? ಅದು ಯಾವ್ಯಾವ ತರಹದ ಭೂಮಿ ಎನ್ನುವುದು ಸರ್ವೇ ಮಾಡಿಸಿದ್ದಿರಾ? ಅದು ರೆವಿನ್ಯೂ ಲ್ಯಾಂಡ್? ಕೆರೆಯಲ್ಲಿ ಮಾಡಿದ್ದಾರೆಯೆ? ಗೋಮಾಳದಲ್ಲಿ ಮಾಡಿದ್ದಾರೆಯೆ? ತಾವು ಈಗ ಓದಿ ಹೇಳಿದಂತೆ ಕೆಲವು ಹಸಿರು ವಲಯಗಳಿಗೆ ರಿಯಾಯಿತಿ ಕೊಟ್ಟಿದ್ದೀರಿ. ಇಂಥ ಕಡೆ ಮಾಡಿದರೆ ಬೇಡ, ಆಗುವುದಿಲ್ಲ ಎಂದು 15 ಕಂಡೀಷನ್ಸ್ ಓದಿದಿರಿ. ಅದರ ಜೊತೆಗೆ ಯಾರೋ ಒಬ್ಬ ರಿಯಲ್ ಎಸ್ಟೇಟ್ ಮಾಡುವವನು ಭೂಮಿಯ ಹಕ್ಕುಪತ್ರವುಳ್ಳವನು ಯಾರೋ ಇರುತ್ತಾನೆ, ಅವರ ಹತ್ತಿರ 5 ಎಕರೆ 10 ಎಕರೆ ತೆಗೆದುಕೊಂಡು ಬಿಡುವುದು. ಮೈಸೂರಿನಲ್ಲಿ ಎಲ್ಲಾ ಆಗಿದೆ. ಮೈಸೂರಿನಲ್ಲಿ ರಾಘವೇಂದ್ರ ನಗರದಲ್ಲಿ ಜಮೀನು ಯಾರದೋ ಇವನು ಯಾವನೋ ಜಿಪಿಎ ಹೋಲ್ಡರ್ ತೆಗೆದುಕೊಂಡ, ಪಾಪ, ಜನಗಳು ಸೈಟ್ಸ್ ಇವೆ ಎಂದು ತೆಗೆದು ಕೊಂಡುಬಿಟ್ಟರು. ಅವನು ಒಂದು ಐದು ರೂಪಾಯಿಯ ಛಾಪಾ ಕಾಗದದಲ್ಲಿ ನಿನಗೆ 20x30 ಸೈಟ್ ಕೊಟ್ಟಿದ್ದೇನೆಂದು ಬರೆದುಕೊಟ್ಟು ಬಿಟ್ಟಿದ್ದಾನೆ. ಇನ್ನೊಬ್ಬರಿಗೆ 40x50 ಸೈಟ್ಸ್ ಬರೆದುಕೊಟ್ಟು ಬಿಟ್ಟ. ಅದಕ್ಕೆ ನೀವು ಎಲ್ಲಾ ನಗರಗಳಲ್ಲಿ ಒಂದು ಸರ್ವೇ ಮಾಡಿಸಬೇಕು. 20x30, 30x40, 40x60, 50x80 ಸೈಟ್ಸ್ ಎಷ್ಟು ಇವೆ? ಅದಕ್ಕಿಂತಲೂ ದೊಡ್ಡ ಪ್ರಮಾಣದ ಸೈಟ್ಸ್ ಎಷ್ಟು ಇವೆ? ಎಂದು ಸರ್ವೇ ಮಾಡಿಸಬೇಕು. ಇದರಲ್ಲಿ ನಿಜವಾಗಿ ಮನೆ ಕಟ್ಟಿಕೊಂಡು ವಾಸ ಮಾಡುವವರು ಎಷ್ಟು ಜನರು ಇದ್ದಾರೆ? ಮನೆ ಕಟ್ಟಿ ಬಾಡಿಗೆಗೆ ಎಷ್ಟು ಜನರು ಕೊಟ್ಟಿದ್ದಾರೆ? ಇಂಥವುಗಳನ್ನು ಸರ್ವೇ ಮಾಡದೇ, ನಾವು 3 ರಿಂದ 5 ಲಕ್ಷ ಜನರು ಇದ್ದಾರೆ, ಅವರು ಹೇಳಿರುವುದು ಹಾಗೆಯೆ. ಇದರಲ್ಲಿ ಉದ್ದೇಶ ಮತ್ತು ಕಾರಣಗಳಲ್ಲಿ 3 ರಿಂದ 5 ಲಕ್ಷ ಎಂದು ಹೇಳಿರುವುದನ್ನು ನೀವು ಓದಿದ್ದೀರಾ? ಕೃಷಿ ಭೂಮಿಯಲ್ಲಿದ್ದುದರಿಂದ ನಿಷೇಧಿಸಲಾಗಿತ್ತು. ನಿಷೇಧಿಸುವ ದಿನಾಂಕದವರೆಗೆ ಸುಮಾರು 3 ರಿಂದ 5 ಲಕ್ಷ ವ್ಯಕ್ತಿಗಳು. ಅಂದರೆ ನಿಮಗೆ ನಿಖರವಾಗಿಲ್ಲ. 3, 5 ಅಂದರೆ 2 ಲಕ್ಷ

ಮಧ್ಯದಲ್ಲಿ ಇಟ್ಟುಕೊಂಡುಬಿಟ್ಟಿದ್ದೀರಿ. ನಾಲ್ಕೂ ಮುಕ್ಕಾಲು ಇಲ್ಲ, ಮೂರೂವರೆ ಇಲ್ಲ, 3 ಲಕ್ಷ ಆಗಬಹುದು, 5 ಲಕ್ಷ ಆಗಬಹುದು. ನೀವು ಈ ಬಗ್ಗೆ ರೀತಿ ಲೆಕ್ಕಾಚಾರ ಮಾಡಿ ಅಂದಾಜು ಮಾಡಿದ್ದೀರೋ ನಿಮಗೆ ಗೊತ್ತಿಲ್ಲ. ಸುಮ್ಮನೆ ಏನೋ ಒಂದು 3 ರಿಂದ 5 ಎಂದು ಕುರುಡು ಲೆಕ್ಕ ಹೇಳಿದ ಹಾಗೆ ಬಿಡುತ್ತದೆ. ನೀವು ಕರೆಕ್ಟಾಗಿ ಇಷ್ಟು ಜನರು ಇದ್ದಾರೆ, ಇಷ್ಟು ಜನರದು ನಾವು ಸಕ್ರಮ ಮಾಡಬೇಕು, ಬೆಂಗಳೂರಿನಲ್ಲಿ ಇಷ್ಟು ಜನರು ಇದ್ದಾರೆ, ಮೈಸೂರಿನಲ್ಲಿ ಇಷ್ಟು ಇದ್ದಾರೆ, ಹುಬ್ಬಳ್ಳಿ-ಧಾರವಾಡದಲ್ಲಿ ಇಷ್ಟು ಇದ್ದಾರೆ, ಇವರಿಗೆಲ್ಲಾ ಈ ತರಹದ ಸೈಟ್ಸ್ ಇವೆ ಎಂದು ಹೇಳಬೇಕು. ಕೆಲವರು ಎರಡು ಅಂತಸ್ತಿನ ಮನೆ ಕಟ್ಟಿದ್ದಾರೆ, ಅವರು ಎಷ್ಟು ದೊಡ್ಡ ಸೈಟ್‌ನಲ್ಲಿ ಮನೆ ಕಟ್ಟಿದ್ದಾರೆಂದು ನೀವು ಹೇಳುವುದಿಲ್ಲ. Because it is not mentioned. ಅದು 20x30ರಲ್ಲಿ ಕಟ್ಟಿದ್ದಾರೆಯೆ? ಅಥವಾ 40x50 ರಲ್ಲಿ ಕಟ್ಟಿದ್ದಾರೆಯೆ? 30x40 ರಲ್ಲಿ ಕಟ್ಟಿದ್ದಾರೆಯೆ? You don't know. ಅಲ್ಲಿ ಏನಾಗಿದೆ ಒಬ್ಬ ಇಂಜಿನಿಯರ್ Structure ನೋಡಿ ಫೈನಲ್ ಮಾಡಿರುತ್ತಾನೆ. ಎರಡು ಅಂತಸ್ತಿನ ಮನೆ ಇದ್ದರೂ ನೀವು ಮಾಡುವುದಕ್ಕೆ ಹೊರಟಿದ್ದೀರಿ. ಯಾರು ಅಲ್ಲಿ ಅನ್‌ಆಥರೈಸ್ಡ್ ಆಗಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾನೆ, ಅವನ ಮೇಲೆ burden of proof shift ಮಾಡುತ್ತಿದ್ದೀರಿ. Not on the man wgo sold the property. Seller ಮೇಲೆ ಇಲ್ಲ. Purchaser, ಯಾರು ಮನೆ ಕಟ್ಟಿದ್ದಾರೆ, ಅವರ ಮೇಲೆ, ಏನು ಹೇಳುತ್ತೀರಿ ಅಂದರೆ (2ಎಎ) ನಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 2009ರ ಪ್ರಾರಂಭದ ದಿನಾಂಕಕ್ಕೆ ಮೊದಲು ಭೂ ಬಳಕೆಯ ಬದಲಾವಣೆ ಅಥವಾ ವ್ಯತ್ಯಾಸವನ್ನು ಮಾಡಲಾಗಿದೆ ಎಂಬುದನ್ನು ರುಜುವಾತುಪಡಿಸುವ ಹೊಣೆಗಾರಿಕೆಯು ಅಂಥ ಅನಧಿಕೃತ ವ್ಯತ್ಯಾಸ ಎಂದು ಇವನಿಗೆ ಪಾಪ ಹೇಗೆ ಗೊತ್ತಾಗುತ್ತದೆ? ಯಾರೋ ಮಾಡಿ ಹೊರಟು ಹೋಗಿದ್ದಾನೆ.

ಯಾರೋ ಅಬ್ಬೆಪಾರಿ ಸೈಟ್‌ಗಳನ್ನು ಮಾರಿಕೊಂಡು ಹೋಗಿದ್ದಾನೆ. ಈಗ ಇದನ್ನು ತೆಗೆದುಕೊಂಡಿರುವ ಬಡವ ಏನು ಮಾಡಬೇಕು? ಇದರಲ್ಲಿ un-authorized occupancy ಯಲ್ಲಿ ಎರಡು ತರಹ ಇದ್ದಾರೆ. ಅಂದರೆ, ಮನೆ ಇಲ್ಲದೆ 20x30 ರೆವಿನ್ಯೂ ಸೈಟ್ ಅಥವಾ ಇನ್ಯಾರೊ ಕೊಟ್ಟಿರುವ ಸೈಟ್‌ನಲ್ಲಿ ಮನೆ ಕಟ್ಟಿರತಕ್ಕಂಥವರು ಇರುತ್ತಾರೆ. ಆದ್ದರಿಂದ ಮೊದಲು ಸರ್ವೆ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ಯಾವ್ಯಾವ ತರಹದ ಜನರಿ

ದ್ದಾರೆಂದು ಮತ್ತು ಎಷ್ಟು ಅಳತೆ ಸೈಟ್‌ಗಳಿವೆಂದು ಮತ್ತು ಇದರಲ್ಲಿ ಕನ್ವರ್ಷನ್ ಆಗಿರುವುದು ಮತ್ತು ಆಗದೇ ಇರತಕ್ಕಂಥ ಸೈಟ್‌ಗಳು ಎಷ್ಟಿವೆ ಎಂಬುದರ ಬಗ್ಗೆ ನಿಖರವಾಗಿ ತಿಳಿದುಕೊಳ್ಳುವುದಕ್ಕಾಗಿ ಸರ್ವೆ ಮಾಡಬೇಕಾಗುತ್ತದೆ. ಈಗ ತರಾತುರಿಯಲ್ಲಿ ಏಕೆ ಮಾಡುವುದಕ್ಕೆ ಹೊರಟಿದ್ದೀರಿ? ಇದರ ಬಗ್ಗೆ ನೋಟೀಫಿಕೇಷನ್ ಏನಾದರೂ ಆಗಿದೆಯೇ? ಇದರ ಬಗ್ಗೆ ಒಂದು ಸರ್ವೆಯನ್ನು ಮಾಡಿಸದೆ ಇದನ್ನು ಮಾಡುತ್ತಿದ್ದೀರಿ. ಬೆಂಗಳೂರು ಹಾಗೂ ರಾಜ್ಯದ ಇತರ ನಗರಸಭಾ ಪ್ರದೇಶಗಳಿಗೆ ಅನ್ವಯವಾಗುತ್ತದೆಂದು ಹೇಳಿದ್ದಿರಿ. ಅಂದರೆ, It covers all Corporations and City Municipalities Counil. ಇದರಲ್ಲಿ ಪುರಸಭೆಗಳು ಬರುವುದಿಲ್ಲ. ಬಡವರಿಗೆ ಸಕ್ರಮ ಮಾಡಿಕೊಡುವುದಕ್ಕೆ ಸಂಬಂಧಪಟ್ಟಂತೆ ನಮ್ಮದೇನೂ ವಿರೋಧ ಇಲ್ಲ. ಸಕ್ರಮ ಖಂಡಿತಾ ಮಾಡಬೇಕು. ಇದು ಬಹಳ ವರ್ಷಗಳಿಂದ ಪೆಂಡಿಂಗ್ ಇದೆ. ಇದನ್ನು ಮಾಡಬೇಕೆಂದಾಗಲೆಲ್ಲಾ ಕಾನೂನಿನಲ್ಲಿ ತೊಡಕುಗಳಿವೆ ಎಂದು ಬಹಳ ವರ್ಷಗಳಿಂದ ಇದು ಚರ್ಚೆಯಾಗಿ ಹಾಗೆಯೇ ಮುಂದಕ್ಕೆ ಹೋಗುತ್ತಿತ್ತು. ಈಗ ನಾನು ಹೇಳುವುದೇನೆಂದರೆ, ಈ ಬಿಲ್ ಅನ್ನು ಸಮಗ್ರವಾಗಿ ಬದಲಾವಣೆ ಮಾಡಿದ ನಂತರ ಇಲ್ಲಿಗೆ ತಂದು ಚರ್ಚೆ ಮಾಡಿ ಪಾಸ್ ಮಾಡುವುದು ಬಹಳ ಒಳ್ಳೆಯದು. ಇದನ್ನು ಪಾಸ್ ಮಾಡಬೇಕು. ಆದರೆ, ಇದರ ಬಗ್ಗೆ ಯಾವುದೇ ಒಂದು ಸರ್ವೇ ಮಾಡದೇ ಅಂದರೆ, ಬೆಂಗಳೂರು ನಗರ, ಮೈಸೂರು, ಗುಲ್ಬರ್ಗಾ, ಮಂಗಳೂರು, ಬೆಳಗಾಂನಲ್ಲಿ ಎಷ್ಟು ಇವೆ ಎಂಬುದರ ಬಗ್ಗೆ ಸರ್ವೇ ಮಾಡಿರಬೇಕಾಗಿತ್ತು. ಮತ್ತೆ ಅರ್ಜಿಗಳನ್ನು ಹಾಕಿಕೊಳ್ಳುವುದಕ್ಕೆ ಸಮಯ ಕೊಡಬೇಕು. ಆದರೆ, ಇದರ ಬಗ್ಗೆ ಯಾವುದೇ ಸ್ಪಷ್ಟತೆ ಇಲ್ಲದೆ ತೆಗೆದುಕೊಂಡು ಬಂದರೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ಒಳಗೊಂಡಂತೆ ತಂದರೆ ಚರ್ಚೆ ಮಾಡಿ ಇದಕ್ಕೆ ಒಪ್ಪಿಗೆ ಕೊಡಬಹುದೆಂದು ಹೇಳುವುದಕ್ಕೆ ಬಯಸುತ್ತೇನೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಯಾರೊಬ್ಬ ಲೇಔಟ್ ಮಾಡಿ ಕನ್ವರ್ಷನ್ ಚಾರ್ಜ್ ಮತ್ತು ಸ್ಟ್ಯಾಂಪ್ ಡ್ಯೂಟಿಯನ್ನು ಸರ್ಕಾರಕ್ಕೆ ಕೊಡದೆ ಮೋಸ ಮಾಡಿ ಬೇರೆಯವರಿಗೆ ಸೈಟ್‌ಗಳನ್ನು ಮಾರಾಟ ಮಾಡಿ ಹೋಗಿರುತ್ತಾನೆ. ಇಂಥ ಡೆವಲಪರ್‌ಗಳಿಗೂ ಕೂಡ ತಾವು ಮಾಡಿಕೊಡುತ್ತೀರಾ? ಯಾರೊಬ್ಬ ಸುಮಾರು 50 ಎಕರೆ ಜಮೀನನ್ನು ರೈತರ ಹತ್ತಿರ ತೆಗೆದುಕೊಂಡಿರುತ್ತಾನೆ,

ರೈತರಿಗೂ ಸರಿಯಾಗಿ ಹಣ ಕೊಡದೆ ಟೋಪಿ ಹಾಕಿರುತ್ತಾನೆ ಮತ್ತೆ ಕನ್ವರ್ಷನ್ ಚಾರ್ಜ್ ಮತ್ತು ಸ್ಟ್ಯಾಂಪ್ ಡ್ಯೂಟಿಯನ್ನು ಕಟ್ಟಿರುವುದಿಲ್ಲ. ಇವರಿಗೂ ಕೂಡ ಮಾಡಿಕೊಡುತ್ತೀರಾ? ಇದರ ಬಗ್ಗೆ ಇದರಲ್ಲಿ ಏನೂ ಸಹ ಹೇಳಿಲ್ಲ. ಮತ್ತೆ basic amenities ಕೊಟ್ಟಿರುವುದಿಲ್ಲ. ಮತ್ತೆ ಈ ರೀತಿಯಾಗಿರುವಂಥವುಗಳಿಗೆ ಯಾವ ರೀತಿ ಪೆನಾಲ್ಟಿ ಹಾಕಲಾಗುತ್ತದೆಂದು ಸಹ ಇದರಲ್ಲಿ ಹೇಳಿಲ್ಲ. ಅಂದರೆ, ಕನ್ವರ್ಷನ್ ಚಾರ್ಜಸ್ ಮತ್ತು ಸ್ಟ್ಯಾಂಪ್ ಡ್ಯೂಟಿಯ ಮೇಲೆ ಏನಾದರೂ ಪೆನಾಲ್ಟಿ ಹಾಕುತ್ತೀರಾ? ಇದರಲ್ಲಿ ಅದರ ಬಗ್ಗೆ ಏನು ಹೇಳಿಲ್ಲ. This amendment is silent. If it is going to be a law, how can we pass this? ಅಮೆಂಡ್‌ಮೆಂಟ್ ಪಾಸ್ ಮಾಡಿದರೆ pandora's ಬಾಕ್ಸ್ ಒಪನ್ ಮಾಡಿದಂತಾಗುತ್ತದೆ. ಈ ರೀತಿಯಾದರೆ ಬಹಳ ಕಷ್ಟವಾಗುತ್ತದೆ. ಮತ್ತೆ ಚುನಾವಣೆ ಮುಂಚಿತವಾಗಿ ಇದನ್ನು ಏಕೆ ಆತುರದಲ್ಲಿ ತಂದಿದ್ದೀರಿ? ಎಲ್ಲಾ ಕಾರ್ಪೋರೇಷನ್, ನಗರಸಭೆ ಭಾಗಗಳಲ್ಲಿ ಎಷ್ಟು ಬರುತ್ತವೆಂಬುದರ ಬಗ್ಗೆ ಸರ್ವೆ ಮಾಡಿಸಿ, ಸರ್ವೆ ರಿಪೋರ್ಟ್‌ನ್ನು ಸಹ ಕೊಡಿ ಆನಂತರ ಇದನ್ನು ಪಾಸ್ ಮಾಡೋಣ.

ಶ್ರೀ ಟಿ.ಬಿ.ಜಯಚಂದ್ರ (ಶಿರಾ) : ಮಾನ್ಯ ಉಪಾಧ್ಯಕ್ಷರೆ, ಇದನ್ನು ತಂದಿರುವ ಉದ್ದೇಶ one time measure ಗೋಸ್ಕರ ಎಂದು ಹೇಳುವಾಗ, It is proposed to regularize all such sites and layouts developed prior to 31-12-2008. ಇದರ ಅರ್ಥ ಏನೆಂದು ಹೇಳಬೇಕು. ಲೇಔಟ್‌ಗಳನ್ನು ಸಹ ಅಪ್ರೂವ್ ಮಾಡುತ್ತೇವೆಂಬ ನಿಮ್ಮ ಉದ್ದೇಶ ಇದ್ದರೆ ಇನ್ಯಾರಿಗೆ ನೀವು ಸಹಾಯ ಮಾಡಬೇಕೆಂದು ನೀವು ಇದ್ದೀರಾ? ಲೇಔಟ್‌ನ್ನು ಯಾರೊಬ್ಬ ಮಾಡಿ ಆತನಿಗೆ ಬೇಕಾದ ಹಾಗೆ ಅಂದರೆ, 5-10 ಅಡಿ ರಸ್ತೆಯನ್ನು ಮಾಡಿ ಬೇರೆಯವರಿಗೆ Power of Attorney ಮಾಡಿ ಹೋಗಿರುತ್ತಾನೆ. ಆತ ಫಿಸಿಕಲ್ ಆಗಿ ಲೇಔಟ್‌ನ್ನು ಮಾಡಿರುವುದಿಲ್ಲ. ಕೇವಲ ಒಂದು ರೆವಿನ್ಯೂ ಸ್ಕೆಚ್ ಮೇಲೆ ಲೇಔಟ್ ಮಾಡಿ ಬೇರೆಯವರಿಗೆ ಸೈಟ್‌ಗಳನ್ನು ಕೊಟ್ಟು ಹೋಗಿರುತ್ತಾನೆ. ಅಲ್ಲಿ ರಸ್ತೆಗೆ ಎಷ್ಟು ಜಾಗ ಬಿಟ್ಟಿದ್ದಾರೆಂದು ಸೈಟ್ ತೆಗೆದುಕೊಂಡಿರುವವನು ಅಲ್ಲಿಗೆ ಹೋಗಿ ನೋಡಿದಾಗಲೇ ಗೊತ್ತಾಗುವುದು. ಈಗ ಸಿ.ಎಂ.ಸಿ.ಗಳನ್ನು ಹೊಸದಾಗಿ ಸೇರಿಸಿಕೊಂಡಿದ್ದೀರಿ. ಇಲ್ಲಿ ರಸ್ತೆ ಮತ್ತು ಇತರೆ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಬಹಳಷ್ಟು ತೊಂದರೆಗಳು ನಿಮಗೆ ಆಗುತ್ತವೆ. ನೀವು ದೊಡ್ಡದಾಗಿ ಸಿಡಿಪಿ

ಪ್ಲಾನ್ ಮಾಡಿದ್ದೀರಿ. In conformity with the plan ಇದೆಯೇ ಅಥವಾ ಇಲ್ಲವೇ ಎಂದು ನೋಡಬೇಕಾಗುತ್ತದೆ. ಆದರೆ, ಇದ್ಯಾವುದನ್ನು ಮಾಡಿ ಕೊಳ್ಳದೆ ಮಾಡುವುದಕ್ಕೆ ಹೋಗುತ್ತಿದ್ದೀರಿ. ಇದೊಂದು power of Attorney ಇದ್ದ ಹಾಗೆ. ಹೇಗೆಂದರೆ, ಜಮೀನು ಒಬ್ಬರದು ಇದ್ದರೆ ಆತನ ಹತ್ತಿರ ಒಂದು power of Attorney ಇರುತ್ತದೆ. ಈತ ಇನ್ನೊಬ್ಬನಿಗೆ power of Attorney ಮಾಡಿ ಕೊಟ್ಟಿರುತ್ತಾನೆ. ಈ ರೀತಿಯಾಗಿ ನಾಲ್ಕೈದು ಜನ power of Attorney ಮಾಡಿಕೊಂಡು ಬೇರೆಯವರಿಗೆ ವರ್ಗಾವಣೆ ಯಾಗಿರುತ್ತದೆ. Ultimately, ಯಾರು end user ಇರುತ್ತಾನೆಯೋ ಆತನ ತಲೆ ಮೇಲೆ ಇದೆಲ್ಲಾ ಕೊನೆಗೆ ಬೀಳುತ್ತದೆ. ಈ ರೀತಿ ಆದಾಗ ಕೊನೆಯ ವ್ಯಕ್ತಿಯನ್ನು ನೀವು ಹೇಗೆ accountable ಮಾಡುತ್ತೀರಿ? ಎಲ್ಲರಿಗೂ ಮೋಸ ಮಾಡಿ ದೋಚಿಕೊಂಡು ಹೋದವರಿಗೆ ಯಾವ ರೀತಿಯಾಗಿ ಅಕೌಂಟ್‌ಬೆಲ್ ಮಾಡುತ್ತೀರಿ? Ultimately, responsibility ಬೀಳತಕ್ಕಂಥದ್ದು ಈತನ ಮೇಲೆ. ಯಾರೊಬ್ಬ ಬಡವ ಮನೆ ಕಟ್ಟಬೇಕೆಂದು ಆಸೆ ಪಟ್ಟು ಮನೆ ಕಟ್ಟಬೇಕೆಂದು ಪ್ರಯತ್ನ ಪಟ್ಟವನ ಮೇಲೆ ನಾವು penalize ಮಾಡಿದಂತಾ ಗುತ್ತದೆ. ನೀವು ಇದನ್ನು blanket ರೀತಿಯಲ್ಲಿ ತರುವುದರಿಂದ ಏನಾಗುತ್ತ ದೆಂದರೆ, ಎಲ್ಲೋ ಒಂದು ಕಡೆ ಖಾಸಗಿ ಲೇಔಟ್‌ಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ಅನುಕೂಲವಾಗುತ್ತದೆಂಬ ಭಾವನೆ ಬರುತ್ತದೆ. ಸಂಬಂಧಪಟ್ಟ ಜಾಗ ಯಾರ ಅನುಭವದಲ್ಲಿ ಇರುತ್ತದೆಂದು ಮತ್ತು ಅದಕ್ಕೆ ಆಧಾರ ಏನು ಎಂಬುದು ಸಹ ಬೇಕಾಗುತ್ತದೆ. ಆದರೆ, ಯಾರು ಮನೆಗಳನ್ನು ಕಟ್ಟಿಕೊಂಡಿರು ತ್ತಾರೆಯೋ ಅವರುಗಳು ಇದರಲ್ಲಿ ಬರುತ್ತಾರೆಂದು ತಾವು ಹೇಳಿದ್ದೀರಿ. ಆದರೆ, ಮನೆಗಳನ್ನು ಕಟ್ಟಿಕೊಂಡಿರುವುದಕ್ಕೆ ಆಧಾರ ಏನು? ಫಿಸಿಕಲ್ ಆಗಿ ಮನೆಗಳನ್ನು ಕಟ್ಟಿಕೊಂಡು ವಾಸ ಇದ್ದರೆ ಬೇರೆ. ಆದರೆ, ಇದರಲ್ಲಿ ಖಾಲಿ ಸೈಟ್‌ಗಳಿಗೂ ಮಾಡುವುದಕ್ಕೆ ಸಾಧ್ಯ ಇದೆ. ಆದ್ದರಿಂದ ಖಾಲಿ ಸೈಟ್‌ಗಳಿಗೆ ಯಾವ ರೀತಿಯಾಗಿ ತಾವು ಮಾಡುತ್ತೀರಿ? ಅದಕ್ಕೆ ಏನು ದಾಖಲಾತಿಗಳಿ ರುತ್ತವೆ? power of Attorney ಒಂದು ಲೀಗಲ್ ಡಾಕ್ಯುಮೆಂಟ್ ಎಂದು ಕನ್ಸಿಡರ್ ಮಾಡಿ ಮಾಡುವುದಕ್ಕೆ ಆಗುತ್ತದೆಯೇ? ಆದ್ದರಿಂದ, ಇದಕ್ಕೆ ಸ್ವಲ್ಪ ರೀ–ಲುಕ್ ಕೊಡುವುದಕ್ಕೋಸ್ಕರ Joint Select Committee ಗೆ ರೆಫರ್ ಮಾಡಿದರೆ ಒಳ್ಳೆಯದು. ಆನಂತರ 15 ಅಥವಾ ಒಂದು ತಿಂಗಳಲ್ಲಿ ಇದನ್ನು

ಇಲ್ಲಿಗೆ ತಂದರೆ ಒಳ್ಳೆಯದು. ಏಕೆಂದರೆ, ಇದು ಸಿಎಂಸಿ ಪ್ರದೇಶದಲ್ಲಿರುವವರಿಗೂ ಕೂಡ ಅನ್ವಯವಾಗುತ್ತದೆಂದು ಹೇಳುತ್ತಿದ್ದೀರಿ. ಆದ್ದರಿಂದ, ಇದು ಎಲ್ಲಿಯೂ ಕೂಡ exploitation ಆಗಬಾರದು. ಬಡವರಿಗೆ ಇದರಿಂದ ನಿಜವಾಗಿಯೂ ಕೂಡ ಸಹಾಯವಾಗಬೇಕು. 3 ರಿಂದ 5 ಲಕ್ಷ ಜನರಿದ್ದಾರೆಂದು ತಾವು ಹೇಳುತ್ತಿದ್ದೀರಿ. ಆದರೆ, ಇನ್ನು ಜಾಸ್ತಿ ಜನರಿದ್ದಾರೆ. ಏಕೆಂದರೆ, ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡುವುದು ಸೂಕ್ತವೆಂದು ನನ್ನ ಭಾವನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ) : ಮಾನ್ಯ ಉಪಾಧ್ಯಕ್ಷರೆ, ಈ ಬಿಲ್ ಅನ್ನು ತಂದಿರುವುದಕ್ಕೆ ನಾನು ಸ್ವಾಗತ ಬಯಸುತ್ತೇನೆ. ಏಕೆಂದರೆ ಇದು ಅತ್ಯವಶ್ಯಕವಾದಂಥ ಬಿಲ್ ಆಗಿದೆ. ಆದರೆ, ಇದರ ರೂಪರೇಷೆಗಳು ಸರಿಯಾಗಿಲ್ಲವೆಂಬುದು ನನ್ನ ಭಾವನೆಯಾಗಿದೆ. ಅವರು ಮಾಡಿರುವುದು ಸರಿ ಆದರೆ, ಅವರು ಮಾಡಿರುವಂಥ ರೀತಿ ಸರಿಯಾಗಿಲ್ಲ. ಆದ್ದರಿಂದ, ಇದನ್ನು ಸ್ವಲ್ಪ ಮಾರ್ಪಾಡು ಮಾಡಿಕೊಳ್ಳಬೇಕಾಗುತ್ತದೆ. ನಗರ ಸಭೆ ಪ್ರದೇಶಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳೆಂದು ಇದರಲ್ಲಿ ಇದೆ. ಇದರಲ್ಲಿ ಪುರಸಭೆಗಳನ್ನು ದಯಮಾಡಿ ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ಪುರಸಭೆ ವ್ಯಾಪ್ತಿಯ ಪಕ್ಷದಲ್ಲಿನ ಜಾಗದಲ್ಲಿ ಕೆಲವು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅವರಿಗೆ ಕರೆಂಟ್, ನೀರು ಕೊಡುತ್ತೇವೆ. ಆದರೆ, ಅವರಿಂದ ಕಂದಾಯ ವಸೂಲು ಮಾಡುವುದಕ್ಕೆ ಆಗುವುದಿಲ್ಲ. ಇಂಥ ಒಂದು ಪರಿಸ್ಥಿತಿ ಈಗ ಇದೆ. ಆದ್ದರಿಂದ, ಇದನ್ನು ಸ್ಪಷ್ಟವಾದ ರೀತಿಯಲ್ಲಿ ತರಬೇಕಾಗುತ್ತದೆ. ಈಗ ಸಮಯ ಕೊಟ್ಟು ಅರ್ಜಿ ಕರೆಯಿರಿ. ಎಲ್ಲರೂ ಅರ್ಜಿ ಹಾಕಿಕೊಳ್ಳಲಿ, ಆನಂತರ ಅದು ಸರಿಯಾಗಿದೆಯೇ ಅಥವಾ ಇಲ್ಲವೇ ಎಂದು ನಗರಸಭೆ ಅಥವಾ ಪುರಸಭೆ ಅಧಿಕಾರಿಗಳು ತೀರ್ಮಾನ ಮಾಡಲಿ. ಆನಂತರ ಎಷ್ಟು ಎಂದು ನಿಖರವಾದಂಥ ಮಾಹಿತಿ ಸಿಗುತ್ತದೆ. ನಂತರ ಇದನ್ನು ಮಾಡಿದರೆ ಅನುಕೂಲವಾಗುತ್ತದೆ. ಇದರಿಂದ ಬೇರೆಯವರು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಆಗಬಾರದು. ಕೆಲವೊಂದು ತಿದ್ದುಪಡಿಯೊಂದಿಗೆ ಸರಿಯಾದ ರೀತಿಯಲ್ಲಿ ರೂಪರೇಷೆಗಳನ್ನು ಮಾಡಿ ಮತ್ತೆ ಅರ್ಜಿಗಳನ್ನು ಕರೆದು, ಇದಕ್ಕೆ ಸಮಯವನ್ನು ಕೊಟ್ಟು ಸ್ಥಳೀಯವಾಗಿಯೇ ಅದನ್ನು ಭದ್ರಮಾಡಿಕೊಂಡು ಸರಿಯಾದ ರೀತಿಯಲ್ಲಿ ಇದನ್ನು ತಂದರೆ ಇದರಿಂದ

ಬಡವರಿಗೆ ಅನುಕೂಲವಾಗುತ್ತದೆಂಬ ಮಾತನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 95ನೇ ಪ್ರಕರಣಕ್ಕೆ ತಿದ್ದುಪಡಿ ತರುವಂಥ ಅವಶ್ಯಕತೆ ಇರಲಿಲ್ಲವೆಂದು ನಾನುದರೂ ಭಾವಿಸುತ್ತೇನೆ. ಏಕೆಂದರೆ, ಇದೇ ಸದನದಲ್ಲಿ Karnataka Regularization of un-Authorized Construction Act 1984 ಅನ್ನು ನಾವು ಈಗಾಗಲೇ ಜಾರಿ ಮಾಡಿದ್ದೇವೆ. ಇದರ ಪ್ರಕಾರ 1994–95ನೇ ಇಸವಿಯಲ್ಲಿ un-authorized construction ಅನ್ನು ಅಕ್ರಮ–ಸಕ್ರಮ ಕೆಲಸವನ್ನು ರಾಜ್ಯದಲ್ಲಿ ಒಂದು ಬಾರಿ ಜಾರಿ ಕೊಡುವಂಥ ಪ್ರಯತ್ನವನ್ನು ಸಹ ಮಾಡಿದ್ದೇವೆ. ಇದರಲ್ಲಿ ಸೆಕ್ಷನ್ (2ಎ) ಸಬ್‌ಸೆಕ್ಷನ್ (V) "ಬೇರೊಬ್ಬ ವ್ಯಕ್ತಿಗೆ ಸೇರಿದ್ದು, ಅರ್ಜಿದಾರನು ಅದರ ಮೇಲೆ ಯಾವುದೇ ಹಕ್ಕನ್ನು ಹೊಂದಿರದಿದ್ದಾಗ" ಎಂದು ಮಾಡಿದ್ದೀರಿ. Title of the property ವಿಚಾರ ಬಂದಂಥ ಸಂದರ್ಭದಲ್ಲಿ, ಅಂದರೆ, ಕೃಷಿ ಭೂಮಿ ಅಥವಾ ಸರ್ಕಾರಿ ಭೂಮಿ ಅಥವಾ ಖಾಸಗಿ ವ್ಯಕ್ತಿಗೆ ಸೇರಿದ ಜಾಗ ಇರಬಹುದು. ಲ್ಯಾಂಡ್ ಕನ್ವರ್ಷನ್ ಆಗದೇ ಇರುವಂಥ ಸಂದರ್ಭದಲ್ಲಿ RTC ಯಲ್ಲಿರುವಂತೆ ಅವನು 5 ಅಥವಾ 10 ರೂಪಾಯಿ ಛಾಪಾ ಕಾಗದ ಮೇಲೆ ಬರೆಸಿ ಬೇರೆಯವರಿಗೆ ಮಾರಿರುವಂಥ ಪ್ರಕರಣಗಳು ಇವತ್ತಿನ ದಿವಸ ನಗರ ಪ್ರದೇಶಗಳಲ್ಲಿ ಹೆಚ್ಚಾಗಿವೆ.

(8-00PM)

ಇದು ಬಹುಶಃ ನಮ್ಮ ನಾಯಕರು ಹೇಳಿದ ರೀತಿಯಲ್ಲಿ ಹಿಂದೆ ನಾವು ಏನೊಂದು ಅವಕಾಶವನ್ನು ಕೊಟ್ಟಿದ್ದೆವು. ಬೆಂಗಳೂರಿನಲ್ಲಿ folder ಖಾತಾ ಕೊಡುವಂಥ ಸಂದರ್ಭದಲ್ಲಿ ಯಾವ ವ್ಯಕ್ತಿ ನಿಜಕ್ಕೂ ಅಲ್ಲಿ ವಾಸಕ್ಕೆ ಇದ್ದಾನೆ, ಅಂಥವರಿಗೆ ಮಾಡಿ ಕೊಡಬೇಕು ಎನ್ನುವಂಥ ಪ್ರಯತ್ನ ಮಾಡಿದಂಥ ಸಂದರ್ಭದಲ್ಲಿ development charges sq. feet ಗೆ ಇಂತಿಷ್ಟು ಕೊಡಬೇಕು ಎನ್ನುವಂಥದ್ದನ್ನು ನಾವು ನಿಗದಿ ಮಾಡಿ ನಗರ ಪಾಲಿಕೆಗಳಾದ ಮೈಸೂರು ಆಗಿರಬಹುದು, ಬೆಂಗಳೂರು ಆಗಿರಬಹುದು. ರಾಜ್ಯದ ಬೇರೆ ಬೇರೆ ನಗರ ಪಾಲಿಕೆಗಳಲ್ಲಿ ಸಾಕಷ್ಟು ಹಣ ಸಂಗ್ರಹವಾದಂಥ ಪ್ರಕರಣಗಳು ನಮ್ಮ ಮುಂದೆ ಇವೆ. ಆ ದುಡ್ಡನ್ನು ಇವತ್ತಿನವರೆಗೆ ಏನು ಮಾಡಿದ್ದಾರೆ, ಆ

ದುಡ್ಡನ್ನು ಎಲ್ಲಿಗೆ ಖರ್ಚು ಮಾಡಿದ್ದಾರೆ ಎನ್ನುವ ಪ್ರಕರಣ ಸಿಗದಿರುವುದು ನಗರ ಪಾಲಿಕೆಗಳಲ್ಲಿ ಸಿಗದಿರುವಂಥ ಪರಿಸ್ಥಿತಿಯಾಗಿದೆ. ಮೈಸೂರು ನಗರ ಒಂದರಲ್ಲಿಯೇ ಸುಮಾರು 30 ಕ್ಕೂ ಹೆಚ್ಚು ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿವೆ. ಅದರಲ್ಲಿ 40–48 ಸಾವಿರದಷ್ಟು ಮನೆಗಳನ್ನು ಸಕ್ರಮ ಗೊಳಿಸಬೇಕಾದಂಥ ಕೆಲಸ ನಾವು ಮಾಡಬೇಕಾಗಿದೆ. ಮೈಸೂರು ಒಂದರ ಲ್ಲಿಯೇ ಸುಮಾರು 3 ಲಕ್ಷಕ್ಕೂ ಹೆಚ್ಚು ಜನರು ಇಂತಹ ಬಡಾವಣೆ ಗಳಲ್ಲಿ ವಾಸ ಮಾಡತಕ್ಕಂಥ ಸಂಗತಿ ನಮ್ಮ ಮುಂದೆ ಇದೆ. ನಮ್ಮ ಸರ್ಕಾರ Karnataka Land Revenue Act ಗೆ ತಿದ್ದುಪಡಿ ತರುವುದಕ್ಕಿಂತ Regularization of un-authorized Construction Act ಯಾವುದು ನಮ್ಮ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಆಕ್ಟ್ ಇದೆ, ಅದಕ್ಕೆ ಇನ್ನಷ್ಟು ಶಕ್ತಿ ಕೊಟ್ಟು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ನಗರ ಪಾಲಿಕೆಗಳಿಗೆ ಬಹುಶಃ ಸರ್ಕಾರದಿಂದ ಸೂಚನೆ ಕೊಟ್ಟು ಇಂತಹ ಪ್ರದೇಶಗಳು ಎಲ್ಲಿವೆ, ಎಲ್ಲಿ ರಸ್ತೆಗಳ ಅಗಲೀಕರಣವಾಗಬೇಕಾಗಿದೆ, ಎಲ್ಲಿ ನಾಗರೀಕ ಸೌಲಭ್ಯ ಕೊಡಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ, ಆ ಬಡಾವಣೆಯ ಒಂದು ಮೂಲ ನಕ್ಷೆ Comprehensive Develoment plan ಅನ್ನು ತಯಾರಿಸಿ ಒಂದು ಸರ್ವೆ ಮಾಡಿ ತದನಂತರ ಇದಕ್ಕೆ ಬೇಕಾಗಿರುವಂಥ ಒಂದು ತಿದ್ದುಪಡಿ ಮತ್ತು ಆ ಜನರಿಗೆ ಅನುಕೂಲ ಮಾಡಿಕೊಡುವುದಕ್ಕೆ ಸರ್ಕಾರ ದಿಂದ ಸಾಧ್ಯವಾದರೆ ಅದಕ್ಕೆ ನಾವು ನಿಜವಾಗಲೂ ಸ್ವಾಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಜೊತೆಗೆ Town and Country planning Act ಅಡಿಯಲ್ಲಿ ಆಯಾ ನಗರಪಾಲಿಕೆಯವರು ಏನು ಬೈಲಾ ಮಾಡಿಕೊಂಡಿ ರುತ್ತಾರೆ, 30x40 ನಿವೇಶನದಲ್ಲಿ ಎರಡು ಮಹಡಿಗಳನ್ನು ಕಟ್ಟಿಕೊಳ್ಳುವಂಥ ಒಂದು ಅವಕಾಶ ಅವರಿಗೆ ಕಾನೂನಿನಲ್ಲಿಯೇ ಇದೆ. ಮಾನ್ಯ ಸಚಿವರು ಎರಡು ಮಹಡಿಗಿಂತ ಹೆಚ್ಚು ಮಾಡಿದಲ್ಲಿ ಅದನ್ನು ಸಕ್ರಮಗೊಳಿಸುವುದಕ್ಕೆ ನಮಗೆ ಸಾಧ್ಯವಿಲ್ಲವೆನ್ನುವಂಥ ಮಾತನ್ನು ಸಹ ಇಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಎಲ್ಲೆಲ್ಲಿ high tension wire ಇದೆ, ಎಲ್ಲೆಲ್ಲಿ storm water drains ಹೋಗುತ್ತಿದೆ, ನಾವು ನಗರದ ಒಂದು ಸಮಗ್ರ ಅಭಿವೃದ್ಧಿಗೆ ಪೂರಕವಾದಂಥ ಒಂದು ನಕ್ಷೆಯನ್ನು ನಾವು ತಯಾರಿಸಿ ಚರ್ಚೆ ಮಾಡಿದರೆ ಇದಕ್ಕೆ ನಮ್ಮ ಎಲ್ಲ ರೀತಿಯ ಸಹಕಾರವನ್ನು ನಾವು ಕೊಡಬಹುದು. ಇದರ ಜೊತೆಗೆ ತೀರಾ ಬಡತನದಲ್ಲಿರುವಂಥ ಜನರಿಗೆ ಅನುಕೂಲ ಮಾಡುವಂಥ ಒಂದು ಕಾನೂನು

ಆಗುತ್ತದೆ. ಇದನ್ನು ತರಾತುರಿಯಲ್ಲಿ ಮಾಡುವುದು ಅಗತ್ಯವಿಲ್ಲವೆನ್ನುವಂಥದ್ದು ಇಲ್ಲ. ಬಹುಶಃ ನಮ್ಮ ಅಕ್ರಮ ಸಕ್ರಮ ಮಾಡಬೇಕಾದರೆ ವಿಧಿವಿಧಾನಗಳು ಇವೆ. ಒಂದು ನಿವೇಶನವನ್ನು ನಾವು ಸಕ್ರಮಗೊಳಿಸಬೇಕಾದರೆ, development charges ಅನ್ನು ನಾವು ಯಾವ ರೀತಿಯಾಗಿ ವಿಧಿಸಬೇಕು. ಅದನ್ನು ನಾವು ಯಾರಿಂದ ಪಡೆಯಬೇಕು ಇದರ ಜೊತೆಗೆ ಹಣವಂತರು ಸುಮಾರು ಒಂದು ಎರಡು ಎಕರೆ ಪ್ರದೇಶದಷ್ಟು ಜಮೀನು ತೆಗೆದುಕೊಂಡು ಸಣ್ಣ ಸಣ್ಣ ನಿವೇಶನಗಳನ್ನು ತೆಗೆದುಕೊಂಡು ಬಾಡಿಗೆ ವಸೂಲು ಮಾಡುವ ದಂಧೆ ಇಂತಹ ಒಂದು ಬಡಾವಣೆಗಳಲ್ಲಿ ಹೆಚ್ಚಾಗಿ ನಾವು ನೋಡುತ್ತೇವೆ. ಹಾಗಾಗಿ ಬಡವರು ಬಡವರಾಗಿಯೇ ಉಳಿಯುತ್ತಾರೆ. ಶ್ರೀಮಂತರು ಇಂತಹ ಕಾನೂನಿನ ಅಡಿಯಲ್ಲಿ ಲಾಭ ಮಾಡಿಕೊಳ್ಳುವಂಥ ಪ್ರಯತ್ನವನ್ನು ಮಾಡಿಕೊಳ್ಳುವುದು ಬೇಡ. ಹಾಗಾಗಿ ಯಾರು ಅಲ್ಲಿ ವಾಸಕ್ಕೆ ಇದ್ದಾರೆ, ಅವರ ಹಿನ್ನೆಲೆ ಏನು? ಅವರ ಶಕ್ತಿ ಏನು ಎನ್ನುವುದನ್ನು ನಾವು ಒಂದು ಸರ್ವೆ ಮೂಲಕ ಅದನ್ನು ಪತ್ತೆ ಹಚ್ಚಿ ಯಾವ್ಯಾವ ನಗರ ಪಾಲಿಕೆಗಳಲ್ಲಿ ಎಷ್ಟೆಷ್ಟು ಬರುತ್ತದೆ, ಅದು ಸಮಗ್ರವಾಗಿ ಅಭಿವೃದ್ಧಿ ಮಾಡಬೇಕಾದರೆ ಕಳೆದ ವರ್ಷ ಪ್ರತಿಯೊಂದು ನಗರಪಾಲಿಕೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅನುದಾನವಾಗಿ 100 ಕೋಟಿ ರೂ.ಗಳನ್ನು ಏನು ಕೊಟ್ಟಿದ್ದಾರೆ, ಇಂತಹ ಪ್ರದೇಶಗಳಿಗೆ ನಾವು ಏನಾದರೂ ಮಾಡಬೇಕು. ಇವತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕೆ ಸ್ಥಳೀಯ ಸಂಸ್ಥೆಗಳು ಆಗಿರಬಹುದು ಅಥವಾ ಶಾಸಕರುಗಳು ಆಗಿರಬಹುದು, ಕುಡಿಯುವ ನೀರು, ಒಳಚರಂಡಿ, ಬೀದಿ ದೀಪಗಳು ಎಲ್ಲವನ್ನೂ ಕೊಡುತ್ತಿದ್ದೇವೆ. ಆದರೆ ಅದು ಸಕ್ರಮವಾಗಿಲ್ಲ. ಅದಕ್ಕೆ ಯಾವುದೇ ರೀತಿಯಾಗಿ ಕಂದಾಯವನ್ನು ವಸೂಲಿ ಮಾಡುವುದಕ್ಕೆ ಅವಕಾಶವಿಲ್ಲ. ಹಾಗಾಗಿ ನಾವು ಸಕ್ರಮಗೊಳಿಸಿದಲ್ಲಿ ಆ ನಿವೇಶನ ಅಥವಾ ಮನೆಗೆ ಮಾಲೀಕತ್ವದ ಎಲ್ಲಾ ಒಂದು ಟೈಟಲ್ ಕೊಡುವಂಥ ಒಂದು ಅಂಶ ಯಾವುದರಲ್ಲಿಯೂ ಅಡಗಿಲ್ಲ. ಹಾಗಾಗಿ ಇದನ್ನು ತರಾತುರಿಯಲ್ಲಿ ತುರುವುದು ಬೇಡ. ನಮ್ಮ ನಾಯಕರು ಈಗಾಗಲೇ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ನನ್ನ ಈ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಏನು ಈ ವಿಧೇಯಕವನ್ನು ಮಂಡಿಸಿದೆ, ಅದು ಸ್ವಾಗತಾರ್ಹವಾದರೂ ಕೂಡ ಅದರ ಮೂಲ ಉದ್ದೇಶ ಈಡೇರುವುದಕ್ಕೆ ಸಾಧ್ಯವಿಲ್ಲ

ಎನ್ನುವುದು ನನ್ನ ಅಭಿಮತ. ಸರ್ಕಾರ ಒಂದು ರೀತಿಯಲ್ಲಿ vague ಆಗಿ 3–5 ಲಕ್ಷ ರೂ.ಗಳು ಎಂದು ಹೇಳುತ್ತಾರೆ. ಯಾವುದೇ ಕೂಡ ಸರ್ವೆ ಮಾಡಿಲ್ಲ. ಈಗ ಕಾನೂನಿನಲ್ಲಿ ಅವಕಾಶವಿದೆ, ಪರಿಶಿಷ್ಟ ಜಾತಿಯವರಿಗೆ ಶೇಕಡಾ 15 ಕೊಡುಬೇಕು ಪರಿಶಿಷ್ಟ ಪಂಗಡಕ್ಕೆ 3% ಎಂದು ಇದೆ. ಇದನ್ನು ಕೊಡ ಬೇಕಾದರೆ ಅದನ್ನು ಪಾಲಿಸಬೇಕಾಗುತ್ತದೆ. ಈ ಸರ್ವೆಯಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿಯವರು ಇದ್ದಾರೆ, ಎಷ್ಟು ಜನ ಪರಿಶಿಷ್ಟ ಪಂಗಡದವರು ಇದ್ದಾರೆ, ಅವರು ಎಷ್ಟು ವರ್ಷದಿಂದ ಇದ್ದಾರೆ, ಅದು ಕೂಡ ತಿರ್ಮಾನವಾಗ ಬೇಕಾಗುತ್ತದೆ. ಅದರ ಜೊತೆಯಲ್ಲಿ ಎಷ್ಟು ಜನ ಅಲ್ಪಸಂಖ್ಯಾತರು ಇದ್ದಾರೆ, ಹಿಂದುಳಿದ ವರ್ಗದವರು ಎಷ್ಟು ಜನ ಇದ್ದಾರೆ, ಇತರೆ ಸಮಾಜದವರು ಎಷ್ಟು ಜನ ಇದ್ದಾರೆ, ಇವರು ಕೊನೆಯ ದಿನಾಂಕ: 31.12.08 ಏನು ಮಾಡಿದ್ದಾರೆ, ಈ ವಿಧೇಯಕ ಏನಾದರೂ ಜಾರಿಗೆ ಬಂದರೆ ಇತ್ತೀಚೆಗೆ ಬೇಕಾದರೂ ನಿರ್ಮಿಸಿಕೊಳ್ಳಬಹುದು. ಇವರು 7 ತಿಂಗಳು ಮುಂಚಿತವಾಗಿ ಇರಬೇಕೆಂದು ಹೇಳುತ್ತಾರೆ. ನಾವು ಇದನ್ನು ಜಾರಿಗೆ ತರಬೇಕಾದರೆ ಹಿಂದೆ ಬಹಳಷ್ಟು ವರ್ಷಗಳಿಂದ ಯಾರು ಅಲ್ಲಿದ್ದಾರೆ, ಅಕ್ರಮವಾಗಿ ಮನೆಗಳನ್ನು ಯಾರು ಕಟ್ಟಿಕೊಂಡಿದ್ದಾರೆ, ನಾವು ಅವರಿಗೆ ಜಾರಿಗೆ ಕೊಡವೇಕು. 7 ತಿಂಗಳು ಮುಂಚೆ ನಾವು ಕಾನೂನನ್ನು ತಂದರೆ ಇತ್ತೀಚೆಗೆ ಕಟ್ಟಿಕೊಂಡವನು ಕೂಡ ಇವರು ಹಳಬರು ಎಂದು ಹೇಳುವ ಒಂದು ಅಂದಾಜು ಇರುತ್ತದೆ. ಅದನ್ನು ಕೂಡ ತಾವು ಗಮನಿಸಬೇಕು. ಜೊತೆಗೆ ದರವನ್ನು ನಿಗದಿ ಮಾಡಿಲ್ಲ. ಎಷ್ಟು ವರ್ಷದ ಮನೆಗೆ ಎಷ್ಟು? ಹೊಸ ಮನೆಗಳಿಗೆ ಹೇಗೆ? ತಾವು ಈ ಕಾನೂನನ್ನು ನಗರಪಾಲಿಕೆಗಳಿಗೆ ತಂದರೆ ಸಾಲದು. ಪುರಸಭೆಗೆ, ಪಟ್ಟಣ ಪಂಚಾಯತಿಗೆ ಅನ್ವಯಿಸಬೇಕು. ನಿಜವಾಗಿ ಬಡವರು ಪಟ್ಟಣ ಪಂಚಾಯತಿ ಮತ್ತು ಪುರಸಭೆಗಳ ಏರಿಯಾದಲ್ಲಿ ಇರತಕ್ಕಂಥದ್ದು. ಬೆಂಗಳೂರು, ಮೈಸೂರು, ಹುಬ್ಬಳಿ ಮಹಾನಗರ ಪಾಲಿಕೆ ಇರಬಹುದು, ಅಲ್ಲಿ ದೊಡ್ಡ ದೊಡ್ಡ ಶ್ರೀಮಂತರು ಹೆಚ್ಚಾಗಿ ಇರುತ್ತಾರೆ. ಅದನ್ನು ಕೂಡ ತಾವು ಗಮನಿಸಬೇಕು. ಈ ಎಲ್ಲಾ ದೃಷ್ಟಿಯಿಂದ ನನಗೆ ಅನಿಸತಕ್ಕಂಥದ್ದು ಆತುರದಿಂದ ಮಾಡತಕ್ಕಂಥ ಮಸೂದೆ ಇದು ಅಲ್ಲ. ಸರ್ಕಾರ ಇದರ ಬಗ್ಗೆ ಪ್ರತಿಷ್ಠೆ ಬಿಟ್ಟು ಜಾಯಿಂಟ್ ಸೆಲೆಕ್ಷನ್ ಕಮಿಟಿಗೆ ಹಾಕಬೇಕು. ಇದರ ಬಗ್ಗೆ ಪೂರ್ಣ ಚರ್ಚೆಯಾದ ನಂತರ ಇದನ್ನು ಜಾರಿಗೆ ತರಬೇಕೆಂದು ನಾನು ಈ ವಿಧೇಯಕವನ್ನು ವಿರೋಧ ಮಾಡುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ತಂದಿರುವ ಈ ವಿಧೇಯಕವನ್ನು ಸ್ವಾಗತ ಮಾಡಿದರೂ ಕೂಡ ಕೆಲವು ಸಂಶಯಗಳಿಗೆ ಈಡಾಗಿರತಕ್ಕಂಥದ್ದು. ಇವತ್ತು ನಗರಸಭೆ ಮತ್ತು ಪಟ್ಟಣ ಪಂಚಾಯತಿಗಳು ಎಂದು ಏನು ಹೇಳಿದ್ದಾರೆ, ಇವತ್ತು ನಮ್ಮ ಪಟ್ಟಣ ಪಂಚಾಯತಿ ಮತ್ತು ಮುನಿಸಿಪಾಲಿಟಿಗಳಿಗೂ ಇದು ಅನ್ವಯವಾಗಬೇಕಾಗುತ್ತದೆ. ಇವತ್ತು ಮಾನ್ಯ ಕಂದಾಯ ಸಚಿವರು ಹೇಳಿದಂತೆ ಅನೇಕ ಬಡ ಜನರಿಗೆ ತೊಂದರೆಯಾಗಿರುವುದು ನಿಜ. ನನ್ನ ಗಮನಕ್ಕೂ ಕೂಡ ಅಷ್ಟು ಇಷ್ಟು ಬಂದಿವೆ. ಆದರೆ ಇದರಲ್ಲಿ ಸ್ಪಷ್ಟವಾಗಿ ನೀವು ಯಾವ ರೀತಿಯಾಗಿ ಮಾಡುತ್ತೀರಿ? 30x40 ಸೈಟ್‌ಗೆ ಎಷ್ಟು ಮಾಡಬೇಕು. 40x50 ಸೈಟ್‌ಗೆ ಎಷ್ಟು ಮಾಡಬೇಕು. 1 ಫ್ಲೋರ್ ಇರುವವರಿಗೆ ಎಷ್ಟು ಮಾಡಬೇಕು, ಎರಡು ಫ್ಲೋರ್ ಇರುವಂಥದ್ದಕ್ಕೆ ಎಷ್ಟು ಮಾಡಬೇಕು.? ಅದರ ಬಗ್ಗೆ ತಾವು ಕ್ಲಾರಿಫಿಕೇಶನ್ ಮಾಡಬೇಕು, ಅದನ್ನು ಮಾಡಿದರೆ ಏನೂ ಅಭ್ಯಂತರವಿಲ್ಲ ವೆನ್ನುವುದು ನನ್ನ ಅಭಿಮತವಾಗಿದೆ.

ಶ್ರೀ ಆರ್.ರೋಷನ್ ಬೇಗ್ (ಶಿವಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ಈ ಬಿಲ್‌ನಲ್ಲಿ ಈ ಪದ ಏನಿದೆ "Therefore, the Government has proposed to regularize all sucg sites and layouts developed prior to 31/12/2008 as one time comprehensive scheme, subject to certain reasonable conditions" ಎಂದು ಹೇಳುತ್ತೀರಲ್ಲಾ, sites and layouts ಅಂದರೆ, ಬೆಂಗಳೂರಿನಲ್ಲಿ ಈ ವಿಶ್ವಭಾರತಿ ಲೇಔಟ್‌ಗಳು ಇರುತ್ತವಲ್ಲಾ, ಇಂತಹ ಲೇಔಟ್‌ಗಳನ್ನು regularize ಮಾಡುವುದೇ? ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರು ಇವರು ಏನು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಇದಕ್ಕೊಂದು ಸರ್ವೆ ಮಾಡಿ ಎಷ್ಟು ಜನ ಫಲಾನುಭವಿಗಳು ಇದ್ದಾರೆ, ಬೇಕಾದರೆ ಇದನ್ನು Joint Select Committeeಗೆ refer ಮಾಡಿ. Corporation elections ಈಗ ಹತ್ತಿರ ಬರುತ್ತಿವೆ. This bill is nothning but political Bill. Corporation Electionನಲ್ಲಿ ಜನರನ್ನು ಖುಷಿ ಮಾಡುವುದಕ್ಕೆ code of conduct ಇದ್ದರೂ ಸಹ ಈ ತರಹ ಒಂದು ಬಿಲ್ ತೆಗೆದುಕೊಂಡು ಬರುವುದು ಸರಿಯಾಗಿಲ್ಲ. Loss of state revenue. ಬೇಕಾದಷ್ಟು ಸಾವಿರಾರು Cases High Court and various other Court's ನಲ್ಲಿ case ಇವೆ. ಯಾರೋ

ಒಬ್ಬರು land grabber ಪಕ್ಕದ ರಾಜ್ಯದಿಂದ ಬಂದು ಒಂದು ಲೇಔಟ್ ಮಾಡಿ ಬಿಟ್ಟಿದ್ದಾನೆ. ಅವನು ದುಡ್ಡು ತೆಗೆದುಕೊಳ್ಳುತ್ತಾನೆ, ನೀವು ಅವರಿಗೆ regularize ಮಾಡಿ ಸೀಲ್ ಮಾಡಿ ಪಟ್ಟಾ ಮಾಡಿ ಕೊಡುತ್ತೀರಿ ಏನು? ಆದ್ದರಿಂದ ಇದು ಸರಿಯಾಗಿಲ್ಲ. ದಯವಿಟ್ಟು Corporation Elections ಆದ ಮೇಲೆ ತರಬೇಕು. ನೀವು ಅಲ್ಲಿಯವರೆಗೆ ಸರ್ವೆ ಮಾಡಿ ಆ ಮೇಲೆ ಬಿಲ್ ತೆಗೆದುಕೊಂಡು ಬರಬೇಕು.

ಶ್ರೀ ನೆ. ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಉಪಾಧ್ಯಕ್ಷರೆ, ಅಕ್ರಮ ಮತ್ತು ಸಕ್ರಮ ಮಾಡುವುದಕ್ಕೆ ಸಂಬಂಧಪಟ್ಟಂತೆ ಏನು ಕರ್ನಾಟಕ ಭೂಕಂದಾಯ ತಿದ್ದುಪಡಿ ವಿಧೇಯಕ–2009 ಇದೆ, ಬಹಳಷ್ಟು ದಿವಸಗಳಿಂದ ಇದನ್ನು ತರಬೇಕು ಎನ್ನತಕ್ಕಂಥ ಒತ್ತಾಸೆ ಇತ್ತು. ಆದರೆ ಈ ಒಂದು ಉದ್ದೇಶದಲ್ಲಿ ನಮೂದು ಮಾಡಿದ್ದು ನೋಡಿದರೆ ಒಂದು ರೀತಿಯ ಆತಂಕ ಕಾಣುತ್ತದೆ. ಅನುಮೋದನೆ ಹೊಂದಿ ಅಭಿವೃದ್ಧಿ ಹೊಂದುತ್ತಿರುವ ಬಡಾವಣೆಗಳು ಎನ್ನುವ ಪದ ನೋಡಿದಾಗ ಖಂಡಿತವಾಗಿ ಈ ಬಡವರ ಮತ್ತು ಮಧ್ಯಮವರ್ಗದವರ ನೆಪದಲ್ಲಿ ಬಹಳಷ್ಟು ಜನ shelter ತೆಗೆದು ಕೊಂಡು illegal ಆಗಿ ಲೇಔಟ್‌ಗಳನ್ನು ಮಾಡಿ ಯಾವುದೇ civic amenity ಗಳನ್ನು provide ಮಾಡದೆ ಅಗತ್ಯವಾಗಿರತಕ್ಕಂಥ ನಿರ್ದಿಷ್ಟವಾಗಿರ ತಕ್ಕಂಥ ರಸ್ತೆಗಳನ್ನು ಮತ್ತು ಬೇಕಾಗಿರುವಂಥ ಸೌಲಭ್ಯಗಳನ್ನು ಕೊಡದೆ, ಸಿ.ಎ.ಸೈಟ್ ಗಳು ಎಂದು ತೋರಿಸುವಂಥ ರೀತಿಯಲ್ಲಿ ನಿವೇಶನಗಳನ್ನು ಮಾಡಿ ಕೊಟ್ಟ ಹಾಗೆ ಆಗುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ ನನಗೆ ಚೆನ್ನಾಗಿ ನೆನಪು ಇದೆ. ಶ್ರೀ ಬಿ.ಟಿ. ಸೋಮಣ್ಣನವರು ಬಹುಶಃ ಹಿಂದೆ ಬಿಡಿಎ ನಮ್ಮ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಾಡಿದಾಗ re-convey re-allot scheme ಎಂದು ಹೇಳಿ ಮಾಡಿದರು. ಆ ಸಂದರ್ಭದಲ್ಲಿ ಸಮಗ್ರವಾಗಿ ನಕಾಶೆಯನ್ನು ಮಾಡಿ ಅಲ್ಲಿ ರಸ್ತೆಗಳು ಎಲ್ಲೆಲ್ಲಿ ಅಗತ್ಯತೆ ಇದೆ, ಅದನ್ನು ವೈಡನಿಂಗ್ ಮಾಡಬೇಕೆ, civic amenities ಎಲ್ಲಿ ಬಿಡಬೇಕಾಗುತ್ತದೆ, ಅವರಿಗೆ alternative ಆಗಿ ಸೈಟ್‌ನ್ನು ಕೊಡತಕ್ಕಂತಹ ಈ ರೀತಿಯಾಗಿ ಸಿಟಿಯನ್ನು ಪ್ಲಾನ್ ಮಾಡಿದರೆ ಬಹುಶಃ ಹಿಂದೆಯೇ ನೂರು ವರ್ಷದ ದೂರದೃಷ್ಟಿ ಯನ್ನು ಇಟ್ಟುಕೊಂಡು ನಾವು ಪ್ಲಾನ್ ಮಾಡಬೇಕಾಗುತ್ತದೆ. ಏಕಾಏಕಿಯಾಗಿ ನಾವು ರಾಜಕೀಯ ದೃಷ್ಟಿಯನ್ನು ಇಟ್ಟುಕೊಂಡು ಮುಂಬರುವಂತಹ

ಚುನಾವಣೆಗಳನ್ನು ಇಟ್ಟುಕೊಂಡು ಅಕ್ರಮ ಮತ್ತು ಸಕ್ರಮ ಎಂದು ಘೋಷಣೆ ಯನ್ನು ಮಾಡುವುದರಿಂದ ಬಹುಶಃ illegal layouts ಗಳು ಈ ಒಂದು ನೆಪದಲ್ಲಿ ಮುಖವಾಡದಲ್ಲಿ ಅವು ಸಕ್ರಮವಾಗುವುದರಲ್ಲಿ ಸಂಶಯವಿಲ್ಲ. ದಯಮಾಡಿ ಇದನ್ನು ತರಾತುರಿಯಲ್ಲಿ ಮಾಡುವುದರಿಂದ ಇನೂ ಆಗುವು ದಿಲ್ಲ. ಎಲ್ಲಾ ನಿಬಂಧನೆಗಳನ್ನು ಸಹ ಹೇಳಿದ್ದೀರಿ. ಮೂರರಲ್ಲಿ ಹೇಳುತ್ತೀರಿ. ಉದ್ದೇಶಿತ ರಸ್ತೆಗಳು ಅಥವಾ ಒಳ ಅಥವಾ ಹೊರವರ್ತುಲ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು ಇವೆಲ್ಲವನ್ನು ಹೇಳುತ್ತಾ civic amenities ಇರುವ ಬಗ್ಗೆ ಹೇಳುತ್ತೀರಿ. ಇವೆಲ್ಲವೂ ಯಾವ layout ಗಳಲ್ಲಿ ಇರುತ್ತದೆ. Illegal layout ಇರುವುದಿಲ್ಲ. ಮನೆಗಳು ಎಂದು ನೆಪವನ್ನು ಹೇಳುತ್ತಾ ಈ ರೀತಿಯಾಗಿ ಅದನ್ನು regularize ಮಾಡುವುದು ಸೂಕ್ತವಲ್ಲ. ಇದನ್ನು ತರಾತುರಿಯಲ್ಲಿ ಮಾಡುತ್ತಾ, ನನಗೆ ನೆನಪು ಇರುವ ಹಾಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೂರು ವಾರ್ಡ್‌ಗಳಲ್ಲಿ 2.5 ಲಕ್ಷದಿಂದ 3 ಲಕ್ಷ ನಿವೇಶನಗಳು ಅತಂತ್ರಸ್ಥಿತಿಯಲ್ಲಿವೆ. ನನ್ನ ಕ್ಷೇತ್ರದ ವ್ಯಾಪ್ತಿ ಯಲ್ಲಿ ನಂದಿನಿ ಬಡಾವಣೆಯಲ್ಲಿಯೇ ಬಿಡಿಎಯಲ್ಲಿ ಆಗಿರುವುದನ್ನು delete ಮಾಡಬೇಕು. ಆಗ ಮಾತ್ರ ನಂದಿನಿ ಲೇಔಟ್‌ನಲ್ಲಿ ಪ್ರಯತ್ನ ಆಗುತ್ತದೆ. ಬಹುಶಃ ಬೇರೆ ಬೇರೆ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ notify ಆಗಿರುವುದನ್ನು delete ಮಾಡಿ ಆಗ ಮಾತ್ರ ಅವರಿಗೆ ಪ್ರಯೋಜನ ವಾಗುತ್ತದೆ. ಇಲ್ಲವೆಂದರೆ ಈ ಜನರಿಗೆ ಏನೂ ಪ್ರಯೋಜನವಾಗುವುದಿಲ್ಲ. ಬಿಡಿಎನಲ್ಲಿ amend ಮಾಡಬೇಕು. ಎಲ್ಲಾ ದೃಷ್ಟಿಯಿಟ್ಟುಕೊಂಡು ಇದನ್ನು ಸಮಗ್ರವಾಗಿ ವಿಧೇಯಕವನ್ನು ತಿದ್ದುಪಡಿಗೆ ತರಬೇಕೇ ಹೊರತು ಇದನ್ನು ತರಾತುರಿಯಲ್ಲಿ ಮಾಡುವುದಕ್ಕೆ ಹೋಗಿ ಮುಂದಿನ ಅನಾಹುತಗಳಿಗೆ ನಾವು ಸಾಕ್ಷಿಯಾಗಬಾರದು ಎಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ (ಅರಸೀಕೆರೆ) : ಮಾನ್ಯ ಉಪಾಧ್ಯಕ್ಷರೆ, ಸ್ಟಾಂಪ್ ವಿಧೇಯಕ 2ನೇ ತಿದ್ದುಪಡಿ 2009ನ್ನು ತಂದಿದ್ದಾರೆ. ಇದರ ಬಗ್ಗೆ ತುಂಬಾ ಜನರು ಒಂದಲ್ಲ ಒಂದು ದಿವಸ ಇದು ಸಕ್ರಮವಾಗುತ್ತದೆ ಎಂದು ಕಾಯುತ್ತಿದ್ದಾರೆ. ಹಾಗಿರಬೇಕಾದರೆ ವಿಧೇಯಕವನ್ನು ಹೌಸ್‌ನಲ್ಲಿ ಮಂಡಿಸ ಬೇಕಾದರೆ it should be clear, proper and certain. ವಿಧೇಯಕವು ಸ್ಪಷ್ಟವಾಗಿರಬೇಕು. ಇದರ ಮೇಲೆ mere doubt ಯಾರಿಗೂ ಬರಬಾರದು.

ಹಾಗಾಗಿ ಯಾವುದೇ ವಿಧೇಯಕವನ್ನು ನಮ್ಮ ಈ ಒಂದು ಹೌಸ್‌ನಲ್ಲಿ ಮಂಡಿಸಬೇಕಾದರೆ ಇದು ಯಾವಾಗಲೂ ಸಹ ವಿಧೇಯಕದ ಬಗ್ಗೆ ಯಾರಿಗೂ ಸಹ confusion ಇರಬಾರದು, ಇದು ಸ್ಪಷ್ಟವಾಗಿರಬೇಕು. ಆ ವಿಧೇಯಕವನ್ನು ಓದಿದರೆ ನಮಗೆ ಸಂಪೂರ್ಣವಾಗಿ ಮನದಟ್ಟಾಗಬೇಕು. ಹಾಗಾಗಿ ಈಗ ಸನ್ಮಾನ್ಯ ಮಂತ್ರಿಗಳು ಹೇಳಿದ ಹಾಗೆ ವಿಧೇಯಕದಲ್ಲಿ ಯಾವ ಅಂಶವೂ ಸಹ clear ಇಲ್ಲ. ಎಷ್ಟೋ ಸೈಟ್‌ಗಳು ಉದಾಹರಣೆಗೆ ಹೇಳುವುದಾದರೆ ಮಾನ್ಯ ಸದಸ್ಯರಾದ ಶ್ರೀ ನೆ.ಲ.ನರೇಂದ್ರಬಾಬುರವರು ಹೇಳಿದ ಹಾಗೆ ಬೆಂಗಳೂರು ಸಿಟಿಯಲ್ಲಿ 3 ರಿಂದ 4 ಲಕ್ಷ ಅಕ್ರಮ ಸೈಟ್‌ಗಳು ಇವೆ ಎನ್ನುವಂತಹ ವಿಚಾರವನ್ನು ಹೇಳಿದರು. ಮನೆಗಳನ್ನು ಕಟ್ಟಿಕೊಂಡವರು ಸಹ ಇದ್ದಾರೆನ್ನುವಂತಹ ವಿಚಾರವನ್ನು ಸಹ ಹೇಳುತ್ತಿದ್ದಾರೆ. ಹಾಗಿದ್ದ ಮೇಲೆ ಇದು ಬೆಂಗಳೂರು ಮತ್ತು ಮೈಸೂರಿಗೆ ಸೀಮಿತವಾಗಬಾರದು. ನಗರಸಭೆಗೆ ಸೀಮಿತವಾಗಬಾರದು, ಪುರಸಭೆಗೂ ಸಹ ಇದು ಅನ್ವಯವಾಗಬೇಕಾಗುತ್ತದೆ. ಏಕೆಂದರೆ ಈ ಮಸೂದೆಯ ಮುಖಾಂತರ ಎಲ್ಲರೂ ಸಹ ನೆಮ್ಮದಿ, ನಮಗೆ ಒಂದು ಆಶ್ರಯ ಬಂತು, ನಮಗೆ ಒಂದು title ಬಂತು. ಒಳ್ಳೆಯ ಒಂದು ಭಾವನೆ ಜನಗಳಲ್ಲಿ create ಆಗಬೇಕು. ಆ ಭಾವನೆಯೂ create ಆಗಬೇಕೆಂದರೆ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಿ ಯಾವ ಯಾವ ರೂಪದಲ್ಲಿ ಇದಕ್ಕೆ ನಿರ್ಬಂಧ ಹಾಕಬಹುದು. ಈ layout ಮಾಡಬೇಕಾದರೆ ಏನೇನು amenities ಬೇಕು. ಏನೇನು essential item ಬೇಕು. Water supply ಬೇಕು, roads ಬೇಕು ಇನ್ಯಾವುದಾದರೂ ಪಾರ್ಕಿಂಗ್ ವ್ಯವಸ್ಥೆ ಬೇಕು, ಇವೆಲ್ಲವನ್ನು ಸಹ provision ಇಟ್ಟುಕೊಂಡು ಮಾಡಿದರೆ ಇದು ಸೂಕ್ತವೆಂದು ಹೇಳಿ ಗಡಿಬಿಡಿಯಲ್ಲಿ ಇವೆಲ್ಲವನ್ನು ಮಾಡುವುದಕ್ಕೆ ಹೋಗಿ ಸುಮ್ಮನೆ ಕೈಸುಟ್ಟುಕೊಳ್ಳುವುದು ಬೇಡ ಇದನ್ನು ಸ್ಪಷ್ಟವಾಗಿ ದೀರ್ಘವಾಗಿ ಇದರ ಬಗ್ಗೆ ಚರ್ಚೆಮಾಡಿ ಯಾವುದಾದರೊಂದು ಕಮಿಟಿಯನ್ನು ರಚನೆ ಮಾಡಿ ಇದರ ಬಗ್ಗೆ ದೀರ್ಘವಾದಂತಹ ಆಲೋಚನೆಯನ್ನು ಮಾಡಿ ನಿರ್ಧಾರಕ್ಕೆ ಬರುವುದು ಉತ್ತಮವೆಂದು ನನಗೆ ಅನಿಸುತ್ತಿದೆ.

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ಈ ಒಂದು ಬಿಲ್ ಮೇಲೆ ಬಂದಿರುವಂತಹ ಅಮೆಂಡ್‌ಮೆಂಟ್ಸ್‌ನಲ್ಲಿ ಒಂದು ಸ್ಪಷ್ಟೀಕರಣವನ್ನು ನಾನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನಲ್ಲಿ Un authorized layout ಆಗಿರುವುದು ಹೆಚ್ಚು ಕಡಿಮೆ

ಬಿಎಂಆರ್‌ಡಿಎ ಲಿಮಿಟ್ಸ್‌ನಲ್ಲಿ ಆಗಿದೆ. ಹಳೇ ಬಿಎಂಪಿ ಲಿಮಿಟ್ಸ್‌ನಿಂದ ಆಚೆ ಇರುವಂತಹ ಪ್ರದೇಶದಲ್ಲಿ Un-authorized layouts ಗಳು ಆಗಿವೆ. ವಿಶೇಷವಾಗಿ ಅವೆಲ್ಲವೂ ಆಗಿರುವುದು ಏಕೆಂದರೆ ಬಿಎಂಆರ್‌ಡಿಎ ಹೊಸ Zoneಗಳಿಗೆ regulation ಆಗಿಲ್ಲ. ಅವೆಲ್ಲವೂ ಗ್ರೀನ್ Zone ನಲ್ಲಿ ಬರುತ್ತದೆ. ಹೆಚ್ಚಿನ ಈ un-authorized layouts ಮತ್ತು revenue sites ಬಂದಿರುವುದು green belt area ದಲ್ಲೇ ಬಂದಿರುತ್ತದೆ. ಇದು ಬೆಂಗಳೂರು ಸುತ್ತಮುತ್ತ ಬಂದಿರುತ್ತದೆ. ನಿಮ್ಮ ಒಂದು amendment ನಲ್ಲಿ green belt ನಲ್ಲಿ ಬಂದಿರುವುದನ್ನು regularize ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೀರಿ. ಇದನ್ನು ಯಾವ ರೀತಿಯಾಗಿ ಮುಖ್ಯವಾಗಿರುವಂತಹ ಸಮಸ್ಯೆಗೆ ಹೇಗೆ ಪರಿಹಾರವಾಗುತ್ತದೆ, ಹೊಸ ಬಿಎಂಆರ್‌ಡಿಎ ನೀವು zoneಗೆ regulation ಮಾಡಿದಾಗ ಎಲ್ಲೆಲ್ಲಿ ಇಂತಹ revenue sitesಗಳು ಆಗಿವೆ, ಅದನ್ನು ನೀವು ಹೊಸ master planನಲ್ಲಿ include ಮಾಡಿಕೊಳ್ಳುತ್ತೀರಾ? ಅದನ್ನು ತಾವು ಮಾಡುತ್ತೀರಾ? ನೀವು ಬಿಎಂಆರ್‌ಡಿಎ ಹೊಸದಾಗಿ zoning regulation ಆಗುವವರೆಗೂ ಅವೆಲ್ಲವೂ Green Zone ನಲ್ಲಿಯೇ ಇದೆ. ಅದು apply ಆಗುವುದಿಲ್ಲ. How you are going to regularize the un-authorized layout? ಅದನ್ನು ಹೇಗೆ ಮಾಡುತ್ತೀರಿ? ಅದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ನೀಡಿ. ಇನ್ನೊಂದು ವಿಚಾರವೆಂದರೆ, ಈ hazardous industries ಅನ್ನು ತೆಗೆದಿದ್ದೀರಿ. ಅದರಲ್ಲಿ ಒಂದು ಬಹುಶಃ include ಮಾಡಿಕೊಳ್ಳಬೇಕಾಗುತ್ತದೆ. Even in a couforming zone, it shall be regularized only with the clearance from Karnataka Pollution Control Board. ಅದನ್ನು include ಮಾಡಿಕೊಳ್ಳಿ. ಈಗ ನೀವು ಪೂರ್ತಿ amendment ನ್ನು delete ಮಾಡಿದ್ದೀರಿ. so atleast ಇದನ್ನಾದರೂ include ಮಾಡಿಕೊಳ್ಳಿ. Pollution Control Board ನವರ clearance ನ್ನು ತೆಗೆದುಕೊಂಡು ಅದೇನಾದರೂ unauthorized ಆಗಿ ಬಂದಿದ್ದರೆ ಆ ಮೇಲೆ regularize ಮಾಡಿ. ಅದನ್ನು delete ಮಾಡಿದ್ದಾರಲ್ಲಾ, ಅದನ್ನು ಪೂರ್ತಿಯಾಗಿ ತೆಗೆದಿದ್ದಾರೆ. ಅದನ್ನು ಸಂಪೂರ್ಣವಾಗಿ ತೆಗೆದಿದ್ದಾರೆ O.K. ಅದರ ಬಗ್ಗೆ ತಾವು clarification ಕೊಡಿ.

ಡಾ: ಎ.ಸಿ.ಸುಧಾಕರ್ (ಚಿಂತಾಮಣಿ) : ಮಾನ್ಯ ಉಪಾಧ್ಯಕ್ಷರೆ, ಕಂದಾಯ ಇಲಾಖೆಯಿಂದ ಬಿಲ್‌ನ್ನು ತಂದಿದ್ದಾರೆ. ಇಂತಿಂಥಹ ವಿಚಾರ ಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಇಲ್ಲಿ ಹಲವಾರು ನಿರ್ಬಂಧಗಳನ್ನು ಹೇರಿದ್ದಾರೆ. ಇವತ್ತು ಅಕ್ರಮ ಬಡಾವಣೆಗಳು ಇರಬಹುದು, ಇಲ್ಲಾ ಸಕ್ರಮ ವಾಗಿ ನಿವೇಶನದಲ್ಲಿ ಕಟ್ಟಿರಿವಂತಹದ್ದು ಇರಬಹುದು. ಕೆಲವರು ಕಂದಾಯ ಜಾಗಗಳಲ್ಲಿ ಅನುಮತಿಯನ್ನು ಪಡೆಯದೇ ಬಡಾವಣೆಗಳನ್ನು ನಿರ್ಮಿಸಿರ ತಕ್ಕಂತಹದ್ದು, ನಗರಸಭೆ ಮತ್ತು ಇತರೆ ಸ್ಥಳೀಯ ಸಂಸ್ಥೆಗಳ ಜಾಗದಲ್ಲಿ ಹಾಗೂ ಸರ್ಕಾರಿ ಜಾಗಗಳಲ್ಲಿ ಬಡವರು ಏನು ಕಟ್ಟಿರುವಂತಹ ಮನೆಗಳ ವಿಚಾರ ಇರಬಹುದು. ಇದರಲ್ಲಿ ತಾವು ಹಲವಾರು ವಿಚಾರಗಳನ್ನು ಇಲ್ಲಿ ತಿದ್ದುಪಡಿಯಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಈಗ ಅದನ್ನು ಸಕ್ರಮ ಮಾಡುವಂತಹ ಸಂದರ್ಭದಲ್ಲಿ ಅವರ ಹತ್ತಿರ ಏನು arrearsನ್ನು ಕಂದಾಯ ಇಲಾಖೆಯವರು ತೆಗೆದುಕೊಳ್ಳಬೇಕು ಎಂದು ಇಲ್ಲಿ ತೋರಿಸಿದ್ದಾರೆ. ಈಗ ಮೂಲಭೂತ ಸೌಕರ್ಯಗಳು ಮತ್ತೊಂದು ಬಗ್ಗೆ ಚರ್ಚೆಯನ್ನು ಮಾಡುವುದಾದರೆ ಇಲ್ಲಿ ಹಣವನ್ನು ಕಂದಾಯ ಇಲಾಖೆಯವರು ಪಡೆದರೆ ಅಲ್ಲಿ ಮುಂದೆ ಆಗಬಹುದಾದಂತಹ ಸೌಕರ್ಯಗಳನ್ನು ಕೊಡುವಂತಹವರು ಯಾರು? ನಾಳೆ ದಿವಸ ಅಲ್ಲಿ ನಿವೇಶನದಲ್ಲಿ ಕಟ್ಟಿರುವಂತಹದ್ದಕ್ಕೆ ಅದನ್ನು ಸಕ್ರಮ ಮಾಡಿ ಹಣವನ್ನು ಕಂದಾಯ ಇಲಾಖೆಯವರು ಕಟ್ಟಿಸಿಕೊಂಡರೆ ಅದರಿಂದ ಅಲ್ಲಿಯ ಸ್ಥಳೀಯ ಸಂಸ್ಥೆಗಳಿಗೆ ಆಗತಕ್ಕಂತಹ ಉಪಯೋಗ ವೇನು? ನಾಳೆ ಅಲ್ಲಿ ಯಾವ ರೂಪದಲ್ಲಿ ಅಲ್ಲಿರುವಂತಹ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಸ್ಪಷ್ಟೀಕರಣ ಬೇಕಾಗುತ್ತದೆ. ಕಂದಾಯ ಇಲಾಖೆಯವರು ಆ ಜಾಗಕ್ಕೆ ಏನು fine ಎಂದು collect ಮಾಡುತ್ತಿದ್ದಾರೆ. ಈ ಬಡಾವಣೆಗಳಲ್ಲಿ ಇವತ್ತು ಯಾವುದೇ ರೀತಿಯಾದಂತಹ ಸೌಲಭ್ಯಗಳು ಇರುವುದಿಲ್ಲ. ಅದು ಬೆಂಗಳೂರು ಸುತ್ತಲೂ ಇರಬಹುದು, ನಗರಸಭೆ ಹಾಗೂ ಪುರಸಭೆಗಳ ಜಾಗದಲ್ಲಿಯೂ ಇರಬಹುದು. ಆದ್ದರಿಂದ ಹಣವು ಕಂದಾಯ ಇಲಾಖೆಗೆ ಹೋಗಬೇಕೆ, ಏನು ಸ್ಥಳೀಯ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ವಿನಿಯೋಗಿಸುವಂತಹದ್ದು ಆಗಬೇಕು. ಅದು ರಾಜ್ಯ ಸರ್ಕಾರದ ಇಲ್ಲಿ state poolಗೆ ಬಂದರೆ ಅದು ಅಲ್ಲಿ ಆಗುವುದಿಲ್ಲ. ಮತ್ತೆ ಯಾವುದೇ ಸೌಲಭ್ಯಗಳು ಸಿಕ್ಕುವುದಿಲ್ಲ. ಎಲ್ಲೆಲ್ಲಿ ಅಕ್ರಮ ಸಕ್ರಮಗಳು ಆಗುತ್ತದೆ, ಅದೇ ಭಾಗದ

ಅಭಿವೃದ್ಧಿಯಾಗುವುದಕ್ಕೆ ಮೀಸಲಿಡಬೇಕಾದುದು ಎಂದು ತಾವು ಸೇರಿಸ ಬೇಕಾಗುತ್ತದೆ. ದಯವಿಟ್ಟು ಈ ಕೊನೆಯ ವಿಚಾರವನ್ನು ತರಬೇಕೆಂದು ನಾವು ತಮ್ಮಲ್ಲಿ ಕೋರುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಅನಧಿಕೃತ ಬಡಾವಣೆಗಳಲ್ಲಿ ನಿವೇಶನ ಮತ್ತು ಅನುಮೊದಿತ ಹೊಸದನ್ನು ಮಾಡಬೇಕೆಂದು ಬಿಲ್‌ನ್ನು ತಂದಿದ್ದೀರಿ. ಇದರಲ್ಲಿ ಕೆಲವು ಪುರಸಭೆಗಳನ್ನು ಸೇರಿಸಿರುವುದಿಲ್ಲ. ಉದ್ದೇಶವೇನೆಂದರೆ, ಪಟ್ಟಣ ಪಂಚಾಯಿತಿ ಆಗಲಿ, ಪುರಸಭೆಯಾಗಲಿ ಇದರಲ್ಲಿ ಯಾವುದೂ ಇಲ್ಲ. ಮಹಾನಗರಪಾಲಿಕೆ ಚುನಾವಣೆಯು ಬರುತ್ತದೆನ್ನುವಂತಹ ದೃಷ್ಟಿಯನ್ನಿಟ್ಟುಕೊಂಡು ಏನಾದರೂ ಇದನ್ನು ತಂದಿದ್ದೀರೋ ಗೊತ್ತಿಲ್ಲ. ಏಕೆಂದರೆ, ಯಾರ್‍ಯಾರಿಗೆ ಇವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಲ್ಲಿ real estate ಗೆ ಏನಾದರೂ ಅನುಕೂಲವಾಗಲಿ ದೃಷ್ಟಿಯಿಂದ ಏನಾದರೂ ತಂದಿದ್ದೀರಾ ಎನ್ನುವುದು ಒಂದು ಅನುಮಾನವು ಕಾಡುತ್ತಿದೆ.

ಒಂದು ಸ್ಪಷ್ಟವಾಗಿ ಮಾಡಬೇಕಾಗುತ್ತದೆ. ಇದನ್ನು ಜಂಟಿ ಸದನ ಸಮಿತಿಗೆ ಕಳುಹಿಸಿ ಅಲ್ಲಿ ಆಗುವುದು ಸೂಕ್ತವೆಂದು ನನ್ನ ಭಾವನೆ. ಇದರಿಂದ ಕೆಲವರಿಗೆ real estate ದಂಧೆ ನಡೆಸುವವರಿಗೆ ಅನುಕೂಲವಾಗುತ್ತದೆ. ಇದನ್ನು ಜಂಟಿ ಸದನ ಸಮಿತಿಗೆ ಕಳುಹಿಸಿ ಅಲ್ಲಿ ಏನು ತೀರ್ಮಾನ ವಾಗುತ್ತದೆ, ನೋಡಿ ಆ ನಂತರ ಈ ಬಿಲ್ಲನ್ನು ಮಾಡುವುದು ಒಳ್ಳೆಯದು.

ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ) : ಏನು ತಿದ್ದುಪಡಿ ವಿಧೇಯಕವನ್ನು ಮಾನ್ಯ ಕಂದಾಯ ಸಚಿವರು ತಂದಿರುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಹೇಳಿದ್ದಕ್ಕೆ ನಾನು ಕೂಡ ಅನುಮೋದಿಸುತ್ತೇನೆ. ಈ ಒಂದು ತಿದ್ದುಪಡಿ ವಿಧೇಯಕ ಈ ರಾಜ್ಯಕ್ಕೆ ಬೇಕಾಗಿದೆ ಆದರೆ ಇದರೊಳಗೆ ಉದ್ದೇಶ ಏನಿರಬೇಕೆಂದರೆ ಇದರಲ್ಲಿ ಬಡವರಿಗೆ ಅನುಕೂಲವಾಗುವ ತಿದ್ದುಪಡಿಗಳನ್ನು ತರಬೇಕು. ಇದರಲ್ಲಿ ಬಡವರಿಗೆ, ಹಿಂದುಳಿದವರಿಗೆ, ದಲಿತರಿಗೆ ಅನುಕೂಲ ಆಗುವಂಥ ಯಾವ ಪ್ರಯೋಜನವು ನನಗೆ ಇಲ್ಲಿ ಕಾಣುತ್ತಿಲ್ಲ. ಇದರಿಂದ ಬಹಳ ನೋವಾಗುತ್ತದೆ. ಏಕೆಂದರೆ ಇಂಥ ವಿಚಾರದಲ್ಲಿ ನಮಗೆ ಈ ತಿದ್ದುಪಡಿಯನ್ನು ನೋಡಿದಾಗ ವಾಸ್ತವವಾಗಿ ನಾವು ಈ ಬಗ್ಗೆ ಮಾನ್ಯ ಕಂದಾಯ ಸಚಿವರು ಒಂದು 25 ಪತ್ರಗಳನ್ನು ಬರೆದಿದ್ದೇನೆ. ಅವರು ಅದಕ್ಕೆ ಪೂರಕವಾಗಿ ಉತ್ತರವನ್ನು ಬರೆದಿದ್ದಾರೆ, ನನಗೆ ಬಹಳ ಸಂತೋಷವಾಗುತ್ತದೆ. ಈ ನಿಟ್ಟಿನಲ್ಲಿ ಅವರನ್ನು

ನಾನು ಅಭಿನಂದಿಸುತ್ತೇನೆ. ಎಲ್ಲಿ ಆಗಬೇಕಾಗಿದೆ, ಒಂದು ಉದಾಹರಣೆಯನ್ನು ಕೊಡುತ್ತೇನೆ. ನಮ್ಮ ತೀರ್ಥಹಳ್ಳಿ ಪಟ್ಟಣದಲ್ಲಿ 100 ಹರಿಜನ ಕುಟುಂಬಗಳು ನೂರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅಲ್ಲಿ ಅವರು ವಿದ್ಯುಚ್ಛಕ್ತಿ ಇದೆ, ನೀರಿನ ಬಿಲ್, ಕಂದಾಯ ಎಲ್ಲಾ ಕಟ್ಟುತ್ತಿದ್ದಾರೆ. ಅವರಿಗೆ ಇವತ್ತು ಮಂಜೂರಾತಿ ಪತ್ರ ಇನ್ನೂ ಕೂಡ ಸಿಕ್ಕಿಲ್ಲ. ಅವರು ಇವತ್ತು ಸ್ವಂತ ಕಾಲ ಮೇಲೆ ಒಂದು ಹೆಣ್ಣು ಮಗಳು ಕೆಲಸದಲ್ಲಿ ಇದ್ದಾರೆ, ಅವರು ಅದರ ಮೇಲೆ ಸಾಲ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ, ಏಕೆಂದರೆ no Grant Certificate has been given. ನೀವು ತಂದಿರುವ ಈ ತಿದ್ದುಪಡಿ ಮೂಲತಃ ಬಡವರಿಗೆ ಪೂರಕವಾಗಿರಬೇಕು. ಇದರಲ್ಲಿ ಆದಾಯ ಮಿತಿ ಹಾಕಿರಬೇಕು. ಹತ್ತು, ಐವತ್ತು ಜನ ಸಾವಿರಾರು ಕೋಟಿ ರೂಪಾಯಿಗಳಿರುವ ಜನಕ್ಕೆ ಅನುಕೂಲ ಮಾಡುವಂಥ ವಿಧೇಯಕ ತರುವುದಾದರೆ ಇಲ್ಲಿ ನಾವು ಬಂದಿರುವುದು ಏಕೆ? ನಮ್ಮ 224 ಶಾಸಕರ ಉದ್ದೇಶ ಬಡವರಿಗೆ ಅನುಕೂಲವಾಗುವುದಕ್ಕೆ ಪೂರಕ ವಾಗಿರುವಂಥ ಒಂದು ವಿಧೇಯಕವನ್ನು ತಂದರೆ ಮುಕ್ತ ಕಂಠದಿಂದ ಇದನ್ನು ಸ್ವಾಗತಿಸಬಹುದು. ಇದರಲ್ಲಿ ಆದಾಯ ಮಿತಿ ಇಲ್ಲ, ಪರಿಶಿಷ್ಟ ಜಾತಿಯ ವರಿಗಿಲ್ಲ, ಪುರ ಪಂಚಾಯಿತಿ, ಗ್ರಾಮ ಪಂಚಾಯಿತಿ ಇವ್ಯಾವುದಕ್ಕೂ ಇಲ್ಲ. ಎಲ್ಲೋ ಒಂದು ಕಡೆ, ಹಿಂದೆ ಸಹ 94ಸಿ ಒಂದು ತಂದಿದ್ದರು. ಅದರಿಂದ ಗ್ರಾಮೀಣ ಪ್ರದೇಶದ ರೈತರಿಗೆ ಬಹಳಷ್ಟು ಅನುಕೂಲವಾಗಿದೆ, ಅಕ್ರಮ ಸಕ್ರಮದಲ್ಲಿ ಏನು 94ಸಿ ತಂದಿದ್ದಾರೆ, ಅದರ ಅವಧಿ ಮುಗಿದು ಹೋಗಿದೆ, ನೀವು ಅದನ್ನು ವಿಸ್ತಾರ ಮಾಡಿ ಎಂದು ಪತ್ರ ಬರೆದಿದ್ದೆನು. ಅದಕ್ಕೆ ಕಂದಾಯ ಸಚಿವರು ಉತ್ತರ ಕೂಡ ಕೊಟ್ಟಿದ್ದಾರೆ. ಇದರಲ್ಲಿ ನಾನು ಹೇಳುವುದು ಖಂಡಿತವಾಗಿಯೂ ಕೂಡ ಮಾನ್ಯ ಸಿದ್ದರಾಮಯ್ಯನವರು, ಕುಮಾರಸ್ವಾಮಿಯವರು ಹೇಳಿದಂತಹ ವಿಚಾರ ಬಹಳ ಅಗತ್ಯವಾಗಿದೆ. ಇದಕ್ಕೆ ಖಂಡಿತವಾಗಿಯೂ ಈ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಿ ಅಥವಾ ಮುಂದಕ್ಕೆ ಹಾಕಿ, ಇದರ ಬಗ್ಗೆ ಪೂರ್ಣವಾಗಿ ಚರ್ಚೆಯಾಗಿ ಅಧ್ಯಯನ ಮಾಡಿ ಎಷ್ಟು ಜನರಿಗೆ ಅನುಕೂಲವಾಗುತ್ತದೆ ಅದನ್ನು ನೋಡಿಕೊಂಡು ಈ ವಿಧೇಯಕವನ್ನು ತರಬೇಕು ಎಂದು ಮನವಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಈಗ ಕೆಲವೆಲ್ಲಾ ಈ ಲ್ಯಾಂಡ್ಸ್ ಇವೆಯಲ್ಲಾ, ರಾಮಸ್ವಾಮಿಯವರ ಸಮಿತಿಯವರೆಲ್ಲಾ ಹೋಗಿ ದ್ದರಲ್ಲ, ಅವರು ಮಾಡಿರುವುದು ಇದರಲ್ಲಿ ಕೆಲವು ಇರಬಹುದು, ಮತ್ತೆ

ಕೆಲವು disputed lands ಕೋರ್ಟ್‌ನಲ್ಲಿರಬಹುದು. ಅಂಥವರೆಲ್ಲಾ ಮನೆಯನ್ನು ಕಟ್ಟಿಕೊಂಡಿರಬಹುದು. ಎರಡನೆಯದು ಇದು ಮೈಸೂರು–ಬೆಂಗಳೂರು ಸಿಟಿಯಲ್ಲಿ ಬರುತ್ತಿರುವುದು. ಬೆಂಗಳೂರು ಸಿಟಿ ಸಹ ಸೇರುತ್ತದೆ. ಬೆಂಗಳೂರು ಸುತ್ತ ಮುತ್ತ ಬರುತ್ತದೆ, ಟೌನ್‌ಮುನಿಸಿಪಾಲಿಟಿಗಳು ಬರುತ್ತವೆ. ಬೆಂಗಳೂರಿನಲ್ಲಿ ಉಪ ಚುನಾವಣೆ ಇದೆ. ಇದನ್ನು ಮಾಡುವಾಗ Code of Conduct ಬರುತ್ತದೆಯೇ ಎನ್ನುವುದನ್ನು ನೋಡಬೇಕು. ನಂ.2 ಕೋರ್ಟ್‌ನಲ್ಲಿರುವುದು sub-judice ಆಗುತ್ತದೆಯೇ ಎನ್ನುವುದನ್ನು ಸಹ ನೋಡಬೇಕು. ಅದಕ್ಕೆ ನಾನು ಏಕೆ suggest ಮಾಡಿದೆ ಎಂದರೆ ನೀವು ಇದನ್ನೆಲ್ಲಾ ಮಾಡುವಾಗ ಒಂದು ಸರ್ವೆ ಮಾಡಿಸಿರುವಿರಾ ಎಂಬುದನ್ನು ಮೊದಲು ಹೇಳಬೇಕು. ಇವೆಲ್ಲಕ್ಕೂ ಕೂಡ ಒಂದು ಸರ್ವೆ ಆಗಿದೆಯೇ? ರೆವಿನ್ಯೂ ಲ್ಯಾಂಡ್‌ನಲ್ಲಿ conversion ಆಗದೇ ಕಟ್ಟಿರುವುದು ಒಂದು, ಮಾಲೀಕರ ಹತ್ತಿರ ಪಡೆದು ಕಟ್ಟಿಕೊಂಡಿರುವುದು ಬೇರೆ, ಆಮೇಲೆ G.P.A. holder ಹತ್ತಿರ ತೆಗೆದುಕೊಂಡಿರುವುದು ಬೇರೆ. ಇನ್ನೊಂದು illegal layout ಮಾಡಿ ಕೊಟ್ಟಿರುವುದು ಬೇರೆ. ಆ illegal layout ಇವೆಯಲ್ಲಾ, ಅದರಲ್ಲಿ ಅವನು ಸರ್ಕಾರಕ್ಕೂ ಮೋಸ ಮಾಡಿದ್ದಾನೆ, ಒಬ್ಬ ಜಾಗ ತೆಗೆದುಕೊಂಡು ಮನೆ ಕಟ್ಟಿರುವವನಿಗೂ ಮೋಸ ಮಾಡಿದ್ದಾನೆ. Conversion charge ಸಹ ಕೊಟ್ಟಿಲ್ಲ. ಇನ್ನೊಂದು ಅಲ್ಲಿ ಮಾರಲಿಕ್ಕೆ Stamp Duty ಯನ್ನೂ ಇನ್ನೊಂದು civic amenities ಸಹ ಕೊಟ್ಟಿರುವುದಿಲ್ಲ. ಏನೂ ಇರುವುದಿಲ್ಲ, ಅಂಥ ಸೈಟುಗಳು ಸಹ ಇವೆ, ಅದಕ್ಕೆ ನೀವು not only dwelling houses, it includes sites also. ಅದಕ್ಕೋಸ್ಕರ ಸೈಟ್ಸ್ ಯಾವ ಪ್ರಮಾಣದಲ್ಲಿದ್ದರೂ illegal layout ನಲ್ಲಿ ಯಾರಾದರೂ ಮಾಡಿರುತ್ತಾರೆ, ದೊಡ್ಡ ದೊಡ್ಡ ಸೈಟುಗಳನ್ನು ಅವರಿಗೂ ಮಾಡಿಕೊಡುತ್ತೀರಾ? ಸರ್ಕಾರಕ್ಕೆ Stamp duty ಕೊಡದೆ ಮೋಸ ಮಾಡಿದವರಿಗೆ, Conversion charge ಕೊಡದೆ ಮೋಸ ಮಾಡಿದವರಿಗೂ ಮಾಡುವಿರಾ? ಯಾರೋ ಒಬ್ಬ ಯಾವುದೋ ಊರಿನಲ್ಲಿ ಜಮೀನುಗಳನ್ನು ಮಾರಿಬಿಟ್ಟು ಹೊರಟು ಹೋಗಿರುತ್ತಾನೆ, ಅವನಿಗೂ ಕೊಡುತ್ತೀರಾ? ನಮ್ಮ ದಿನೇಶ್ ಗುಂಡೂರಾವ್ ಹೇಳಿದಂತೆ ಅವೆಲ್ಲಾ ಬರುವುದಿಲ್ಲ, ಗ್ರೀನ್ ಬೆಲ್ಟ್‌ನಲ್ಲಿ ಮಾಡಿಕೊಂಡಿದ್ದಾರೆ, ಅವೆಲ್ಲಾ ಬರುವುದಿಲ್ಲ. ಅಲ್ಲಿಯೂ ಕೂಡ ಯಾರೋ ಬಡವರು ಮಾಡಿಕೊಂಡು ಬಿಟ್ಟಿರುತ್ತಾರೆ,

ಅದಕ್ಕೇನು ಮಾಡುತ್ತೀರಿ? ಅವೆಲ್ಲಾ ಆಗುವುದಿಲ್ಲವೆಂದು ಇಲ್ಲಿ exemption ನಲ್ಲಿ ಹೇಳಿಬಿಟ್ಟಿದ್ದೀರಿ, ಹಾಗಾಗಿ ಇವೆಲ್ಲವನ್ನೂ ಕೂಡ ನಾವು ಬಹಳ ದೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. ಇದಕ್ಕೆ ಸರ್ವೆ ರಿಪೋರ್ಟ್ ಕೂಡ ಬೇಕಾಗುತ್ತದೆ. ಹಾಗಾಗಿ ಈ ವಿಷಯವನ್ನು ಎಲ್ಲಾ ಮಾನ್ಯ ಸದಸ್ಯರು ಹೇಳಿದ್ದಾರೆ, ನಾವು ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆಂದು ತರಾತುರಿಯಲ್ಲಿ ಮಾಡಲಿಕ್ಕೆ ಹೋಗಬೇಡಿ, ಮತ್ತೆ ಬೆಂಗಳೂರು ಕಾರ್ಪೋರೇಷನ್ ಚುವಾವಣೆ ಬರುತ್ತದೆಂದು ಅದಕ್ಕೋಸ್ಕರವಾಗಿ ಉಪಯೋಗವಾಗುತ್ತದೆಂದು ಆ ರೀತಿಯ ರಾಜಕೀಯ ಉದ್ದೇಶವನ್ನು ತಲೆಯಲ್ಲಿ ಇಟ್ಟುಕೊಂಡು ಇದನ್ನು ಮಾಡಲಿಕ್ಕೆ ಹೋಗಬೇಡಿ. Code of Conduct ಇದೆ, ಇದರಿಂದ ನಾನು ಹೇಳುತ್ತೇನೆ, entire bill Joint Select Committee ಗೆ ಹೋಗಲಿ, ಅಲ್ಲಿ ಕುಳಿತುಕೊಂಡು ಎಲ್ಲರೂ ಮುಂದೆ ಏನೂ ತೊಂದರೆ ಆಗದಿರುವ ರೀತಿಯಲ್ಲಿ ಕೂಲಂಕಷವಾಗಿ ಚರ್ಚೆ ಮಾಡಲಿ. ಮತ್ತೆ ಇಂಥದ್ದು ಯಾವುದೇ ಕಾರಣಕ್ಕೂ ಬೆಳೆಯಬಾರದು. ಮತ್ತೆ ರೆವಿನ್ಯೂ ಲ್ಯಾಂಡ್‌ಗಳಲ್ಲಿ without conversion, without stamp duty ಯಾರೂ ತೆಗೆದುಕೊಳ್ಳಬಾರದು ಮತ್ತು ಕಟ್ಟಲಿಕ್ಕೆ ಬಿಡಬಾರದು, ಏಕೆಂದರೆ ಅಧಿಕಾರಿಗಳು ಸಹ ಇದಕ್ಕೆ ಶಾಮೀಲಾಗಿ ಇದನ್ನೆಲ್ಲಾ ಮಾಡಿಬಿಟ್ಟಿದ್ದಾರೆ. ಪದೇ ಪದೇ ಇದನ್ನು ಮಾಡುತ್ತಲೇ ಇರುತ್ತಾರೆ. When will be the end to this. There will be no end. ಎಷ್ಟು ಬೇಕಾದರೂ ಮಾಡುತ್ತಾರೆಂದು ಈ ರೀತಿ ನಡೆದುಕೊಂಡು ಹೋಗುತ್ತಲೇ ಇರುತ್ತದೆ. ಹಾಗಾಗಿಯೇ ಸ್ಲಮ್‌ಗಳು ಆಗಿರುವುದು, ಆಮೇಲೆ ನೀವು ಬೆಂಗಳೂರಿನಲ್ಲಿ ರಸ್ತೆ ಮಾಡಲಿಕ್ಕೆ ಮತ್ತೆ ಮನೆಗಳನ್ನು ಒಡೆಯಬೇಕು. High tension wire ಕೆಳಗೆಲ್ಲಾ ಬಡವರು ಮನೆಯನ್ನು ಕಟ್ಟಿಕೊಂಡು ಬಿಟ್ಟಿರುತ್ತಾರೆ. ಏನು ಮಾಡುತ್ತೀರಿ ಅವರಿಗೆ? ಬೇರೆ alternative sites ಅವರಿಗೆ ಕೊಡುವಿರಾ? ನೀವು ಅದಕ್ಕೆ ಆಗುವುದಿಲ್ಲ, ಅದನ್ನು demolish ಮಾಡುತ್ತೇವೆಂದು ಹೇಳುತ್ತೀರಿ. ಅಂಥ ಅಪ್ಲಿಕೇಷನ್ಸ್ ಅನ್ನು reject ಮಾಡುತ್ತೇವೆಂದು ಹೇಳುತ್ತೀರಿ. ಏನು ಮಾಡುತ್ತೀರಿ ಆಗ? Are you going to provide alternative site to them? ಮನೆಯನ್ನು ಕಟ್ಟಿಕೊಂಡಿದ್ದಾರೆ. They are going to incur heavy loss. ಅದಕ್ಕೇನು ಮಾಡುತ್ತೀರಿ? See total ಆಗಿ there is no clear picture of this There

are so many questions to be answered. ಆ ಕಾರಣದಿಂದ let it be go to Joint Select Committee. ಆ ಸಮಿತಿಯಲ್ಲಿ ಚರ್ಚೆ ಮಾಡಿ. ಅಷ್ಟು ವರ್ಷಗಳಿಂದಲೇ ಬಂದಿವೆಯಂತೆ, ನಾಳೆಯೇ ಮಾಡಬೇಕೆಂದು ಏನಿದೆ? ಅಲ್ಲಿಯವರೆಗೆ ಡಿಸೆಂಬರ್ 2008 ರವರೆಗೆ ಎಂದು ಇಟ್ಟುಕೊಳ್ಳಿ. ಹೇಗೂ ಅರ್ಜಿ ಹಾಕಲಿಕ್ಕೆ ಒಂದು ವರ್ಷ ಟೈಮ್ ಇದೆ ಎಂದು ಹೇಳುತ್ತೀರಿ. ಜಂಟಿ ಸದನ ಸಮಿತಿಯಲ್ಲಿ ಒಂದು ತಿಂಗಳು ಕುಳಿತು ಚರ್ಚೆ ಮಾಡಿ ತೆಗೆದು ಕೊಂಡು ಬರಲಿ, ನಾವು ಮತ್ತೆ ಚರ್ಚೆ ಮಾಡಿ ಅಪ್ರೂವ್ ಮಾಡೋಣ. ಆತುರಾತುರವಾಗಿ ತೆಗೆದುಕೊಂಡು ಬಂದು ಇವ್ಯಾವುದಕ್ಕೂ ಪರಿಹಾರ ಸಿಗದೇ ಹೋದರೆ, ಕಳ್ಳರಿಗೆ ಯಾರ್ಯಾರು land grabbers ಇರುತ್ತಾರೆ, ಅಂಥವರಿಗೆ ಸಹಾಯ ಆಗುವಂಥ ರೀತಿಯಲ್ಲಿ ಆದರೆ It is of on use. ನೀವು ಬಡವರಿಗೆ ಸಹಾಯ ಮಾಡಿದಂತಾಗುವುದಿಲ್ಲ. ಬಡವರಿಗೆ ಸಹಾಯ ಆದರೆ ಅದನ್ನು ನಾವು ಸ್ವಾಗತಿಸುತ್ತೇವೆ. It is not going to help the poor people alone. ಮತ್ತೆ ಯಾರು ಮನೆ ಕಟ್ಟಿದ್ದಾರೆ ಅವರಿಗಷ್ಟೇ ಅಲ್ಲ, ಕೆಲವರೆಲ್ಲಾ ಏನು ಮಾಡಿದ್ದಾರೆಂದರೆ ದುಡ್ಡಿರುವವರು ಹೇಗೋ ಎರಡು ಮೂರು ರೆವಿನ್ಯೂ ಸೈಟುಗಳನ್ನು ತೆಗೆದುಕೊಂಡು ಮನೆಯನ್ನು ಕಟ್ಟಿ ಬಾಡಿಗೆಗೆ ಕೊಟ್ಟಿರುತ್ತಾರೆ. How are you going to regularize? It helps such a man? unlawful gain ಮಾಡಿಕೊಂಡಿರುವವರಿಗೆ, wrongful gain ಮಾಡಿಕೊಳ್ಳಲಿಕ್ಕೆ ಹೊರಟಿರುವವರಿಗೆ are you going to help them? That should not be the interest of the Government. Intention ನೋಡಲಿಕ್ಕೆ ಒಳ್ಳೆಯದಿರಬಹುದು. ಆದರೆ ಒಳಗಡೆ ಹೋದರೆ there are so many things to be answered. ಆ ಕಾರಣದಿಂದ ಈ amendment bill ಅನ್ನು ಜಂಟಿ ಸದನ ಸಮಿತಿಗೆ ವಹಿಸಿ ಇದನ್ನು ಪ್ರತಿಷ್ಠೆ ಮಾಡಿಕೊಳ್ಳಲಿಕ್ಕೆ ಹೋಗಬೇಡಿ. ಇಲ್ಲದೆ ಹೋದರೆ as it is ಇದನ್ನು ಒಪ್ಪಿಕೊಳ್ಳಲಿಕ್ಕೆ ಆಗುವುದಿಲ್ಲ. Atleast ಯಾರೂ ಕೂಡ ಇದಕ್ಕೆ ಒಪ್ಪುವುದಿಲ್ಲವೆಂದು ನಾನೆಂದುಕೊಂಡಿದ್ದೇನೆ. ಇದನ್ನು ಮಾಡಬೇಕೆಂಬುದು ನನ್ನ ಸಲಹೆ.

ಶ್ರೀ ಸಿದ್ದು ಸವದಿ : ಮಾನ್ಯ ಉಪಾಧ್ಯಕ್ಷರೆ, ಈ one time ಇರುವುದನ್ನು ಅನಧಿಕೃತವಾದ ನಿವೇಶನಗಳಲ್ಲಿ ಮನೆ ಕಟ್ಟಿಕೊಳ್ಳುವಂಥ ಫಲಾನುಭವಿಗಳಿಗೆ ಒಂದು one time ಅವರಿಗೆ ಹಕ್ಕುಪತ್ರ ಕೊಡಬೇಕು ಮತ್ತು

regularize ಮಾಡುವಂಥ ಕಾನೂನನ್ನು ತರುವುದು ಬಡವರ ದೃಷ್ಟಿಯಿಂದ ಬಹಳ ಸೂಕ್ತ. ಏಕೆಂದರೆ, ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಸಹಿತ....

(ಗೊಂದಲ)

ಶ್ರೀ ತನ್ವೀರ್‌ಸೇಠ್ : ಇದು ಯಾವುದೇ ರೀತಿಯಲ್ಲೂ ಹಕ್ಕುಪತ್ರ ಕೊಡುವಂಥ ಯೋಜನೆ ಅಲ್ಲ. ಇದು ಅಕ್ರಮ-ಸಕ್ರಮ ಮಾಡುವಂಥಾದ್ದು. ಸಕ್ರಮೀಕರಣಕ್ಕೆ ಎಂದು ಇದನ್ನು ತೆಗೆದುಕೊಂಡು ಬಂದಿದ್ದಾರೆ. ನೀವು ಸಮರ್ಥಿಸಿಕೊಳ್ಳಬೇಕಾದರೆ ಬೇರೆ ರೀತಿಯಲ್ಲಿ....

(ಗೊಂದಲ)

ಉಪಾಧ್ಯಕ್ಷರು : ಆಯಿತು. ಅವರು ಮಾತನಾಡಲಿ.

ಶ್ರೀ ಸಿದ್ದು ಸವದಿ : ಸಕ್ರಮೀಕರಣವನ್ನೇ ನಾನು ಹೇಳುತ್ತಿರುವುದು. ಸಕ್ರಮೀಕರಣ ಮಾಡುವುದು ಬಹಳ ಸೂಕ್ತ. ಏಕೆಂದರೆ, ನಮ್ಮ ಭಾಗದಲ್ಲಿ ಸಹಿತ, ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ revenue ನಿವೇಶಗಳಲ್ಲಿ ಸಾಕಷ್ಟು ಅಂದರೆ ಸುಮಾರು 10-20 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ಅನಧಿಕೃತವಾಗಿ ವಾಸ ಮಾಡುತ್ತಿರುವ ಜನರು ಕೂಡ ಇದ್ದಾರೆ.

(ಗೊಂದಲ)

ಶ್ರೀ ಮಾಲೀಕಯ್ಯ ಗುತ್ತೇದಾರ್ : ನಗರ ಸಭೆ ಎಂದು ಹೇಳುತ್ತಿದ್ದಾರೆ. ಆದರೆ, ನೀವು ಒಂದೇ ಸಲ ಕ್ಷೇತ್ರಕ್ಕೆ ಹೋದಿರಿ ಸ್ವಾಮಿ.

(ಗೊಂದಲ)

ಶ್ರೀ ಸಿದ್ದು ಸವದಿ : ಮಾನ್ಯ ಉಪಾಧ್ಯಕ್ಷರೆ, ಒಟ್ಟಾರೆ ನಮ್ಮ ಭಾಗದ ಉದಾಹರಣೆ ನಾನು ಹೇಳಿದೆ. ನಾನು ನಗರಸಭೆ, ಪುರಸಭೆ ಹೇಳುತ್ತಿಲ್ಲ.

(ಗೊಂದಲ)

ಶ್ರೀ ಗೋವಿಂದ.ಎಂ.ಕಾರಜೋಳ : ಜಮಖಂಡಿಯಲ್ಲಿ ನಗರ ಸಭೆ. ಇದೆ. ಅವರು ಜನಖಂಡಿ ತಾಲ್ಲೂಕಿನವರು. ಜಮಖಂಡಿಯಲ್ಲಿ ನಗರಸಭೆ ಇದೆ ಅದಕ್ಕಾಗಿ ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದು ಸವದಿ : ನನ್ನ ಕ್ಷೇತ್ರದ ಬಗ್ಗೆ ನಾನು ಹೇಳುತ್ತಿದ್ದೇನೆ. ಉದಾಹರಣೆ ಹೇಳುತ್ತಿದ್ದೇನೆ. ನಗರ ಸಭೆ ಮತ್ತು ಪುರಸಭೆಗಳಲ್ಲಿ ಅನಧಿಕೃತವಾಗಿ revenue land ನೊಳಗೆ, ಅರಣ್ಯದೊಳಗೆ ಸಾಕಷ್ಟು ಅಂದರೆ ಸುಮಾರು 20 ವರ್ಷಗಳಿಂದ ಬಡ ಜನರು ಮನೆಗಳನ್ನು ಕಟ್ಟಿಕೊಂಡು ವಾಸ

ಮಾಡುತ್ತಿದ್ದಾರೆ. ಅದಕ್ಕೆ ಈಗ revenue ಪ್ರದೇಶದಲ್ಲಿ ಕಟ್ಟಿರತಕ್ಕಂಥ ಮನೆಗಳನ್ನು ಸಕ್ರಮೀಕರಣ ಮಾಡುವುದಿಲ್ಲ ಎನ್ನುವ ಮಾತನ್ನು ಸಹ ಇಲ್ಲಿ ಹೇಳಿದ್ದಾರೆ. ಆದರೆ, ಸುಮಾರು 20 ವರ್ಷಗಳಿಂದ ಮಾನ್ಯ ಬಂಗಾರಪ್ಪ ನವರು ಮುಖ್ಯಮಂತ್ರಿಯಾಗಿದ್ದಾಗ ಸುಮಾರು 250 ಎಕರೆ ಜಮೀನನ್ನು ಆ ಪ್ರದೇಶದಲ್ಲಿ ಇರತಕ್ಕಂಥ ಜನರಿಗೆ ಬಿಟ್ಟುಕೊಡಬೇಕು ಎಂದು ಆದೇಶ ಮಾಡಿದ್ದರು. ಜಿಲ್ಲಾಧಿಕಾರಿಗಳಿಂದ ಅನೇಕ ಜನರಿಗೆ ಹಕ್ಕುಪತ್ರವನ್ನೂ ಕೊಟ್ಟಿದ್ದಾರೆ. ಸಕ್ರಮೀಕರಣ ಮಾಡಿದ್ದಾರೆ. ಆದರೆ, ಅಂತಹ ಜನ ಇನ್ನೂ 20 ವರ್ಷಗಳಾದರೂ ಪಕ್ಕಾ ಮನೆ ಕಟ್ಟಿಕೊಂಡಿದ್ದಾರೆ. ಅಂತಹ ಜನರಿಗೆ ಮತ್ತು ಕರ್ನಾಟಕ ಸರ್ಕಾರದ revenue land ನಲ್ಲಿ ಆಸ್ತಿಗಳನ್ನು ಕಟ್ಟಿಕೊಂಡು ನಗರಸಭೆ, ಪುರಸಭೆಗಳಲ್ಲಿ ಇರತಕ್ಕಂಥ ಜನರಿಗೆ ಒಂದು ಸಲ ಸಕ್ರಮೀಕರಣ ಮಾಡುವುದು ಬಹಳ ಅವಶ್ಯಕವಾಗಿದೆ. ಈ ಬಿಲ್‌ಅನ್ನು ತಂದಿರತಕ್ಕಂಥದ್ದು ಸೂಕ್ತವಾಗಿದೆ. ಇದನ್ನು ಇದೇ ಒಂದು ಅವಧಿಯಲ್ಲಿ ಪಾಸ್ ಮಾಡಿಕೊಟ್ಟರೆ ಆ ಬಡ ಜನರಿಗೆ ಒಳ್ಳೆಯದು ಆಗುತ್ತದೆ ಎನ್ನುವ ಮಾತನ್ನು ಸಹ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ರವಿ ಸುಬ್ರಹ್ಮಣ್ಯ (ಬಸವನಗುಡಿ) : ಮಾನ್ಯ ಉಪಾಧ್ಯಕ್ಷರೆ, ಅಕ್ರಮ-ಸಕ್ರಮ ಯೋಜನೆಯನ್ನು ತರುತ್ತಿದ್ದೇವೆ. ಇದು ನಗರ ಪ್ರದೇಶದ ಲ್ಲಿರತಕ್ಕಂಥ ಬಡ ಜನರು ತಮ್ಮದೇ ಆದಂಥ ಸ್ವಂತ ಗೂಡನ್ನು ಕಟ್ಟಿಕೊಳ್ಳಬೇಕು, ಎನ್ನುವ ಒಂದು ಇಚ್ಛಾಶಕ್ತಿ ಹೊಂದಿ ಒಂದೊಂದು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅವರಿಗೆ ಇದು ನಿಜವಾಗಲೂ ಆಶಾದಾಯ ಕವಾಗಿರತಕ್ಕಂಥ ವಿಚಾರ. ಬಹುಶಃ ಹಿಂದಿನ ಸರ್ಕಾರಗಳು ಯೋಚನೆ ಮಾಡಿ ಅದು ಬಿ.ಡಿ.ಎ. ಆಗಿರಬಹುದು ಅಥವಾ Slum Board ನಿಂದ ಆಗಿರಬಹುದು, Housing Board ನಿಂದ ಆಗಿರಬಹುದು, ಉತ್ತಮವಾದಂಥ ನಿವೇಶನಗಳನ್ನು ಹಂಚಿ ಜನರಿಗೆ ಎಷ್ಟು ನಿವೇಶನಗಳ ಅವಶ್ಯಕತೆ ಇದೆ, ಅದನ್ನು ಕೊಟ್ಟಿದ್ದಿದ್ದರೆ ಬಹುಶಃ ಇವತ್ತಿಗೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಆದ್ದರಿಂದ ಇವತ್ತು ಏನು ಹಿಂದಿನ ಸರ್ಕಾರಗಳಿಂದ ತಪ್ಪಾಗಿದೆ, ಅದನ್ನು ಜನ ತಮ್ಮದೇ ಆದಂಥ ನಿವೇಶನ ಹೊಂದಿರಬೇಕು, ಒಂದು ಮನೆಯನ್ನು ಹೊಂದಬೇಕು ಎನ್ನುವ ಒಂದು ಆಸೆಯಿಂದ ಇಂತಹ ರೆವಿನ್ಯೂ ಬಡಾವಣೆಗಳಲ್ಲಿ ನಿವೇಶನಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿದ್ದಾರೆ. ಇವತ್ತು ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಬೇರೆ

ಬೇರೆ developers ಬಂದು ಅಲ್ಲಿ ಮನೆಗಳನ್ನು ಕಟ್ಟಿ ಲೇಔಟ್‌ಗಳನ್ನು develop ಮಾಡಿದ್ದಾರೆ ಎಂದು ಹೇಳಿದರು. ನಾವು ಅಲ್ಲೂ ಯೋಚನೆ ಮಾಡಬೇಕು. ಬಹುಶಃ ಸರ್ಕಾರಗಳು ಆ ಜನರು ಯಾರು ಬೇಡಿಕೆಗಳನ್ನು ಇಟ್ಟು ಸುಮಾರು 15–20 ವರ್ಷಗಳ ಕಾಲ ಕಾದರೂ ಅವರಿಗೆ ನಿವೇಶನ ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಅಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಇಂತಹ elements ಗಳ ಕೈಗೆ ಸಿಕ್ಕಿ ತೊಂದರೆಗಳಿಗೆ ಸಿಕ್ಕಿರತಕ್ಕಂಥ ಸಾಧ್ಯತೆಗಳು ಜಾಸ್ತಿಯಾಗಿದೆ. ಆದ್ದರಿಂದ ಇವತ್ತು ಯಾವ ಬಡ ಜನ ಆ ಜಾಗದಲ್ಲಿ ನಿವೇಶನಗಳನ್ನು ತೆಗೆದುಕೊಂಡಿದ್ದಾರೆ, ಅವರಿಗೆ ಸಕ್ರಮ ವನ್ನು ಮಾಡಿಕೊಡಬೇಕು. ಆದರೆ, ಯಾವುದಾದರೂ developer ಯಿಂದ ಅವರಿಗೆ ಅನ್ಯಾಯವಾಗಿದ್ದರೆ, ಅವರನ್ನು ಶಿಕ್ಷಿಸಬೇಕೆ ಹೊರತು ಈ ಬಡ ಜನರಿಗೆ, ಅವರು ಯಾರೇ ಆಗಿರಲಿ, ಯಾವುದೇ ಬಡಾವಣೆಯಾಗಿರಲಿ, ನಿವೇಶನಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿದ್ದರೆ ಅವರಿಗೆ ಸಕ್ರಮ ಮಾಡತಕ್ಕಂಥದ್ದು ಸೂಕ್ತ. ಇವತ್ತು ಸರ್ಕಾರ ಬಡ ಜನರ ಬಗ್ಗೆ ಒಂದು ಉತ್ತಮವಾದಂಥ ಇಚ್ಛಾಶಕ್ತಿಯನ್ನು ಹೊಂದಿ ಒಂದು ಒಳ್ಳೆಯ ನಿರ್ಧಾರ ವನ್ನು ತೆಗೆದುಕೊಳ್ಳುತ್ತಿದೆ. ಎಲ್ಲಾ ಸದಸ್ಯರು ಇದನ್ನು ಬೆಂಬಲಿಸಿದರೆ ನಿಜವಾಗಲೂ ಕರ್ನಾಟಕ ರಾಜ್ಯದಾದ್ಯಂತ ಇರುವ ಯಾವುದೇ ಜನರು ಇದಕ್ಕೆ ಕಾಯುತ್ತಿದ್ದಾರೆ. ಅವರಿಗೆ ಉತ್ತಮವಾದಂಥ ಒಂದು ಸಂದೇಶ ಈ ಮನೆಯಿಂದ ಹೋಗುತ್ತದೆ ಎಂದು ಭಾವಿಸಿದ್ದೇನೆ.

ಶ್ರೀ ಎಂ. ಸತೀಶ್‌ರೆಡ್ಡಿ (ಬೊಮ್ಮನಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಏನು ಇದನ್ನು ಮಂಡನೆ ಮಾಡಿದ್ದಾರೆ, ಕಂದಾಯ ಸಚಿವರಾದಂಥ ಮಾನ್ಯ ಕರುಣಾಕರರೆಡ್ಡಿಯವರು ಏನು ಇವತ್ತು ಈ ಬಿಲ್‌ಅನ್ನು ಮಂಡನೆ ಮಾಡಿದ್ದಾರೆ, ನಮ್ಮ ಕ್ಷೇತ್ರದಲ್ಲೂ ಹಾಗೂ ಬೆಂಗಳೂರಿನಲ್ಲಿನ ಸುತ್ತಮುತ್ತ ಲಿರುವ ಪ್ರದೇಶದಲ್ಲಿ ಇರುವಂಥ ರೆವಿನ್ಯೂ ಬಡಾವಣೆಗಳಲ್ಲಿ ಏನು ಬಡ ಜನತೆ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರು ನಿಜವಾಗಲೂ ತುಂಬಾ ನೋವನ್ನು ಅನುಭವಿಸುತ್ತಿದ್ದಾರೆ. ಕಾರಣವೇನೆಂದರೆ, ಎಲ್ಲಾ GPA ನಲ್ಲಿ ಇರುವಂಥದ್ದು. ಎಲ್ಲರೂ ಏನು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರಲ್ಲಿ ಯಾರೂ ಸಾಹುಕಾರರು ಅಥವಾ ಕೋಟ್ಯಾಧೀಶ್ವರರು ಕಟ್ಟಿಕೊಂಡಿಲ್ಲ. ಬಡ ಜನತೆ 20x30 ಮತ್ತು 30x40 ಅಳತೆ ನಿವೇಶನದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರಿಗೆ ಈ ಸಕ್ರಮ ಯೋಜನೆ ಬಂದರೆ ತುಂಬಾ

ಅನುಕೂಲವಾಗುತ್ತದೆ. ಎಷ್ಟೋ ಬಡ ಜನತೆ ಅವರು ದೀಪವನ್ನು ಹಚ್ಚುವ ಕಾಲದಲ್ಲಿ ಖಂಡಿತ ಈ ಸರ್ಕಾರವನ್ನು ಹಾಗೂ ಈ ಸದನವನ್ನು ನೆನಪಿಸಿಕೊಳ್ಳುತ್ತಾರೆ. ಅಂತಹ ಒಂದು ವಿಧೇಯಕವನ್ನು ಇವತ್ತು ತಂದಿದ್ದಾರೆ. ಅದಕ್ಕೋಸ್ಕರ ಯಾವುದೇ ಕಾರಣಕ್ಕೂ ಈ ಮನೆಯ ಸದಸ್ಯರು ಅದಕ್ಕೆ ಅಡ್ಡಿಪಡಿಸಬಾರದು, ಖಂಡಿತ ಅದನ್ನು ಜಾರಿಗೆ ತರಬೇಕು. ಅದನ್ನು ತಂದರೆ ಅನೇಕ ಬಡಜನತೆಗೆ ಒಳ್ಳೆಯದು ಆಗುತ್ತದೆ. ಅವರ ಮನೆಗಳು ನಿಲ್ಲುವಂಥ ಒಂದು ಸಾಧ್ಯತೆ ಇರುತ್ತದೆ. ಆದ್ದರಿಂದ, ದಯವಿಟ್ಟು ಅಧ್ಯಕ್ಷರೆ, ಇದನ್ನು ತರಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

(ಗೊಂದಲ)

ಶ್ರೀ ಎನ್.ಯೋಗಿಶ್ ಭಟ್ : ವಿಶೇಷವಾಗಿ ಅಲ್ಲಿರುವಂಥ ಸಮುದ್ರ ತೀರದ ಪ್ರದೇಶಗಳಲ್ಲಿ ಕಳೆದ 50 ವರ್ಷಗಳಿಂದ ಅದು ರೆವಿನ್ಯೂ ಲ್ಯಾಂಡ್ ಆಗಿಲ್ಲ. ಅದು ಪೋರ್ಟ್ ಲ್ಯಾಂಡ್ ಆಗಿದೆ. ಅಂತಹ ಕಡೆಗಳಲ್ಲಿ 40–50 ವರ್ಷಗಳಿಂದ ಜನರು ವಾಸ ಮಾಡಿಕೊಂಡಿದ್ದಾರೆ. ಅವರಿಗೂ ಕೂಡ ಒಂದು ವರ್ಷದಲ್ಲಿ ಅಕ್ರಮ–ಸಕ್ರಮ ಆಗಬೇಕು ಎಂದು ಹೇಳುವಂಥ ಹಿನ್ನೆಲೆಯಲ್ಲಿ ಇದಕ್ಕೆ ಸೇರಿಸುವುದನ್ನು ಮಾಡುವುದಕ್ಕೆ ಸಾಧ್ಯವಾದರೆ ಮಾತ್ರ ಅವರು ನೆಮ್ಮದಿಯಿಂದ ಜೀವನ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನೂ ಸಹ ಸೇರಿಸಬೇಕು ಎನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಇಚ್ಛಿಸುತ್ತೇನೆ ಮತ್ತು ಇದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರ ಪ್ರಾರಂಭದ ಮಾತುಗಳಿಂದ, ಅನೇಕ ಮಂದಿ ಮಾನ್ಯ ಸದಸ್ಯರುಗಳಾದ ಜಯಚಂದ್ರರವರು, ಹೆಚ್.ಸಿ.ಬಾಲಕೃಷ್ಣರವರು, ತನ್ವೀರ್‌ಸೇಠ್‌ರವರು, ಕುಮಾರಸ್ವಾಮಿಯವರು, ನಾರಾಯಣಸ್ವಾಮಿಯವರು, ರೋಷನ್‌ಬೇಗ್‌ರವರು, ನರೇಂದ್ರಬಾಬುರವರು, ರುದ್ರೇಶ್‌ಗೌಡರು, ದಿನೇಶ್ ಗುಂಡೂರಾವ್‌ರವರು, ಸುಧಾಕರ್‌ರವರು ಹಾಗೂ ನಮ್ಮ ಯೋಗೀಶ್‌ಭಟ್‌ರವರು, ಸಿದ್ದುಸವದಿಯವರು ಹೀಗೆ ಅನೇಕ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಮಾತನಾಡ ಬೇಕಾದರೆ, ನಿಮ್ಮದು 3 ಲಕ್ಷದಿಂದ 5 ಲಕ್ಷ ಎನ್ನುವುದು clear ಆಗಿಲ್ಲ ಎನ್ನುವ ಮಾತನ್ನು ಹೇಳಿದರು. ಆದರೆ, ಆಮೇಲೆ ಇನ್ನೊಂದು ಮಾತನ್ನು ಹೇಳಿದರು. ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ಇದನ್ನು ತಂದಿದ್ದೀರಿ ಎಂದರು. ನಿಜವಾಗಲೂ ಪ್ರಮಾಣ ಪೂರ್ವಕವಾಗಿ ಹೇಳುತ್ತೇನೆ, ನಮ್ಮಲ್ಲಿ

ಅಂತಹ ಉದ್ದೇಶ ಏನೂ ಇಲ್ಲ. ಅವರಿಗೆ ಇದನ್ನು ಮಾಡಿ ಅಭ್ಯಾಸ ವಿರಬಹುದು. ಮನೆಗೆ ಆ ರೀತಿಯ ಅಭ್ಯಾಸವಿಲ್ಲ. ನಾವು ರಾಜಕೀಯ ದೃಷ್ಟಿ ಇಟ್ಟುಕೊಂಡು ಇದನ್ನು ತಂದಿಲ್ಲ.

ಶ್ರೀ ಸಿದ್ದರಾಮಯ್ಯ : ನಿಮಗೆ ಮಾತನಾಡುವುದಕ್ಕೆ ಬರುವುದಿಲ್ಲವೇ? ನೀವು ಹೇಳಿದಿರಲ್ಲಾ, ಅವರಿಗೇನೂ ಉದ್ದೇಶವಿರಬಹುದು, ನಮಗೇನು ಉದ್ದೇಶವಿರಬಹುದು ಎಂದು ಹೇಳಿದಿರಲ್ಲಾ, ಅದು ಹೇಳಬಹುದೇ? ಇದನ್ನು ಏಕೆ ಬಹಳ ಒತ್ತಿ ಹೇಳುತ್ತೀರಿ? ಈಗ ನೀವು ಚುನಾವಣೆ ಟೈಮ್‌ನಲ್ಲಿ ಇದನ್ನು ತಂದಿದ್ದೀರಿ.

(ಗೊಂದಲ)

ಶ್ರೀ ಜಿ.ಕರುಣಾಕರರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಅವರು ಸಾಕಷ್ಟು ಮಾತನಾಡಿದ್ದಾರೆ. ನಾವು ಅವರಿಗೆ ಏನೂ ಅಡ್ಡಿಪಡಿಸಲಿಲ್ಲ. ನಾವು ಮಾತನಾಡಬೇಕಾದರೆ ತಾವೂ ಕೇಳಿ. ನಂತರ ತಮ್ಮ views ಏನಿದೆ ಅದನ್ನು ಹೇಳಿ. ರಾಜಕೀಯ ಉದ್ದೇಶವನ್ನು ಇಟ್ಟುಕೊಂಡು ನಾವು ಈ ಬಿಲ್‌ಅನ್ನು ತಂದಿಲ್ಲ. ಬಡವರಿಗೆ ಒಂದು ಅವಕಾಶ ಮಾಡಿಕೊಡಬೇಕು. ಆಮೇಲೆ ಕೆಲವು ಮಂದಿ ಮಾತನಾಡಬೇಕಾದರೆ ಹೇಳಿದರು. real estate ನವರಿಗೆ ಅನುಕೂಲ ಮಾಡುವುದಕ್ಕೋಸ್ಕರ ಇದನ್ನು ತಂದಿದ್ದೀರಿ ಎಂದರು. ಸರ್ಕಾರಕ್ಕೆ ಅಂತಹ ಯಾವುದೇ ಉದ್ದೇಶವಿಲ್ಲ. ಆದರೆ, purchasers are the sufferers. ತೆಗೆದು ಕೊಂಡವರಿಗೆ ತೊಂದರೆಯಾಗಿದೆ. ಅವರಿಗೆ ಇದನ್ನು ನಾವು ಒಂದು ಸಲ ಸರಿ ಮಾಡಿ ಅವರ ಜೀವನದಲ್ಲಿ ಒಂದು ನೆಮ್ಮದಿಯನ್ನು ತರಬೇಕು ಎನ್ನುವ ಉದ್ದೇಶದಿಂದ ಈ ಬಿಲ್ ತಂದಿದ್ದೇವೆಯೇ ಹೊರತು real estate ನವರಿಗೆ ಅನುಕೂಲವಾಗುತ್ತದೆ, elections ಬರುತ್ತಿದೆ, ಅದಕ್ಕೆ ಎಲ್ಲಾ ಸೀಟ್‌ಗಳು ನಮಗೆ ಬರಬೇಕು ಎನ್ನುವ ಉದ್ದೇಶದಿಂದ ನಾವು ಈ ಬಿಲ್‌ಅನ್ನು ತಂದಿಲ್ಲ. ಜನರು ಈಗ ಅಷ್ಟು ದಡ್ಡರಲ್ಲ. ಬಹಳಷ್ಟು ಬುದ್ಧಿವಂತರು ಇದ್ದಾರೆ. ಅವರು ಯಾವ ಪಕ್ಷಕ್ಕೆ vote ಹಾಕಬೇಕು, ಯಾವ ಪಕ್ಷ ಬಂದರೆ ಚೆನ್ನಾಗಿ ಕೆಲಸ ಮಾಡುತ್ತದೆ ಎನ್ನುವುದು ಅವರಿಗೆಲ್ಲಾ ಗೊತ್ತಿದೆ. ಇನ್ನೊಂದು ವಿಚಾರವೇನೆಂದರೆ, ನಮ್ಮ ಮಾನ್ಯ ರೇವಣ್ಣನವರೂ ಸಹ ಅದೇ ಆತಂಕವನ್ನು ವ್ಯಕ್ತಪಡಿಸಿದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ : My first question is survey ಮಾಡಿಸಿದ್ದೀರಾ?

ಶ್ರೀ ಜಿ. ಕರುಣಾಕರರೆಡ್ಡಿ : ಇಲ್ಲ ಈಗ ಸರ್ವೆ ಬೇಕಾಗಿಲ್ಲ. ಯಾರು ಅರ್ಜಿ ಹಾಕಿಕೊಂಡಿರುತ್ತಾರೆ ಅವರಿಗೆ regularize ಮಾಡುತ್ತೇವೆ. ಎಲ್ಲರೂ real estate ಹಾಗೂ election ದೃಷ್ಟಿಯಿಂದ ಮಾಡುತ್ತಿದ್ದಾರೆ ಎಂದು ಹೇಳಿದರು. ಆ ಮೇಲೆ ಕೆಲವು ಸದಸ್ಯರು ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ ಕೂಡ ಸಾಕಷ್ಟು ಮಂದಿಗೆ ತೊಂದರೆ ಇದೆ, ಅದನ್ನೂ ಕೂಡ ವ್ಯಾಪ್ತಿ ವಿಸ್ತರಿಸಬೇಕು ಎಂದು ಕೂಡ ಸಾಕಷ್ಟು ಮಂದಿ ಸದಸ್ಯರು ಕೇಳಿದ್ದಾರೆ. ನಾನು ಅವರ ಭಾವನೆಯನ್ನು ಒಪ್ಪುತ್ತೇನೆ. ಇದರ ವ್ಯಾಪ್ತಿಯನ್ನು ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗೆ ವಿಸ್ತಾರ ಮಾಡುತ್ತೇವೆ. ಅದು ಆದ ಮೇಲೆ ತೀರ್ಥಹಳ್ಳಿ ಶಾಸಕರು ಮಾತನಾಡ ಬೇಕಾದರೆ ದಲಿತರಿಗೆ ಅನುಕೂಲವಾಗಿಲ್ಲ ಎಂದು ಮಾತನಾಡಿದರು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಯೊಜನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ತೆಗೆದುಕೊಂಡಿದ್ದಾರೆ. ಅದೆಲ್ಲಾ ತಮಗೆ ಗೊತ್ತಿದೆ. ಕಿತ್ತೂರು ರಾಣಿ ಚೆನ್ನಮ್ಮ ಸ್ಕೂಲ್‌ಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರಾರಂಭ ಮಾಡಿದ್ದಾರೆ. 10ನೇ ಕ್ಲಾಸ್‌ನಲ್ಲಿ ಶೇಕಡಾ 75ರಷ್ಟು ಅಂಕವನ್ನು ಗಳಿಸಿದರೆ 10 ಸಾವಿರ ಬಹುಮಾನ, ಶೇಕಡಾ 60ರಷ್ಟು ಅಂಕ ಪಡೆದರೆ 5 ಸಾವಿರ ಬಹುಮಾನ ಈ ರೀತಿಯಲ್ಲಿ ಮಾಡಿದ್ದಾರೆ. ಈ ಹಿಂದೆ ಮಾಡಿದ್ದೇವೆ. (ಗೊಂದಲ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಏನೂ ಮಾಡಿಲ್ಲ. ತಮ್ಮದು ಏನೋ ಒಂದು ಉದ್ದೇಶವಿದೆ ಎಂದು ಹೇಳಿದರು. ಅದಕ್ಕೆ ನಾನು ಇದನ್ನು ಹೇಳದೆ.

ಉಪಾಧ್ಯಕ್ಷರು : Clarification ಅನ್ನು ನಂತರ ಕೇಳಿ.

ಶ್ರೀ ಜಿ. ಕರುಣಾಕರ ರೆಡ್ಡಿ : ನೀವೆಲ್ಲಾ ಮಾತನಾಡಿದ್ದೀರಿ. ಮಾನ್ಯ ಸಭಾಧ್ಯಕ್ಷರ ಅನುಮತಿ ತೆಗೆದುಕೊಂಡು ನಿಮ್ಮ ಭಾವನೆಗಳನ್ನು ಮತ್ತೆ ವ್ಯಕ್ತಪಡಿಸಬಹುದು. ಮಾನ್ಯ ಉಪಾಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪಂಗಡ ದವರ ಮೇಲೆ ನಮ್ಮ ಸರ್ಕಾರಕ್ಕೆ ವಿಶೇಷ ಅಭಿಮಾನವಿದೆ, ಕಾಳಜಿ ಇದೆ. ಅವರಿಗೆ ನಾವು rules frame ಮಾಡಬೇಕಾದರೆ, ಅವರಿಗೆ ಯಾವ ರೀತಿ

ಕಡಿಮೆ ಮಾಡಬೇಕು, ಎನ್ನುವುದನ್ನು ವಿಚಾರ ಮಾಡಿ, ಕಡಿಮೆ ಮಾಡಿ ಇದನ್ನು ಜಾರಿಗೆ ತರುತ್ತೇವೆ. ಭೂಮಿಯನ್ನು ಸಕ್ರಮಗೊಳಿಸುವುದಕ್ಕೆ ಇವತ್ತು ಅನೇಕ ನಿಯಮಗಳಿವೆ. ಅದರಲ್ಲಿ ದಂಡನೆ, ಇತರೆ ಪರಿವರ್ತನೆ ಶುಲ್ಕವನ್ನು ನಿಗದಿಪಡಿಸುವುದಕ್ಕೆ ನಾವು rules frame ಮಾಡುತ್ತಿದ್ದೇವೆ. ಅರ್ಜಿದಾರರು ಸಕ್ರಮಗೊಳಿಸಲು ಸಲ್ಲಿಸಬೇಕಾಗಿರುವ ನಮೂನೆಗಳು ಮತ್ತು ಪಾವತಿಸ ಬೇಕಾಗಿರುವ ಶುಲ್ಕವನ್ನು ಕೂಡ ನಿಗದಿಪಡಿಸುತ್ತಾರೆ. ನಗರಾಭಿವೃದ್ಧಿ ಇಲಾಖೆ, ಬಿಡಿಎ, ಬಿಬಿಎಂಪಿ, ಪೌರಾಡಳಿತ ಇಲಾಖೆ, Town Planning, ಕಂದಾಯ ಇಲಾಖೆ, BWSSB, KUWSSB, BESCOM, ಇತರೆ ಸ್ಥಳೀಯ ಸಂಸ್ಥೆಗಳ ಸಭೆ ನಡೆಸಿ, ನಿವೇಶನಗಳ ಅಳತೆಗನುಗುಣವಾಗಿ ದರ ಹಾಗೂ ದಂಡನೆಯನ್ನು ವಿಧಿಸುವ ಬಗ್ಗೆಯೂ ಕೂಡ ಅವರು ಅಳವಡಿಸಿದ್ದಾರೆ. ಬಡವರು, ಮಧ್ಯಮ ವರ್ಗದವರು, ಸ್ಥಿತಿವಂತರು ಸ್ವಂತ ಉಪಯೋಗ, ಬಾಡಿಗೆ ಉಪಯೋಗ, ಒಂದಕ್ಕಿಂತ ಹೆಚ್ಚಿನ ನಿವೇಶಗಳನ್ನು ಹೊಂದಿರುವ ಸಂಬಂಧ ಕಟ್ಟಡಗಳೂ ಹೆಚ್ಚಾಗಿದ್ದಾಗ, ಅದನ್ನೆಲ್ಲಾ ಪರಿಶೀಲನೆ ಮಾಡಿ ಅವರಿಗೆ ಯಾವ ರೀತಿ ದಂಡನೆ ವಿಧಿಸಬೇಕೆಂದು ಸೂಕ್ತ ತೀರ್ಮಾನಗಳನ್ನು ತೆಗೆದುಕೊಂಡು ಇದನ್ನು ಜಾರಿಗೆ ತರುತ್ತಾರೆ. ಮಾನ್ಯ ದಿನೇಶ್ ಗುಂಡೂರಾವ್ ಅವರು ಒಂದು ವಿಚಾರವನ್ನು ವ್ಯಕ್ತಪಡಿಸಿದರು ಅದೇನೆಂದರೆ, green belt ನಲ್ಲೂ ಬಹಳಷ್ಟು ಮಂದಿ ಇದ್ದಾರೆ. ಬಿಎಂಆರ್‌ಡಿಎ ಹೊಸ regulation ಬಂದ ಮೇಲೆ, ತಾವು ಇದನ್ನು ಮಾಡುತ್ತೀರಾ ಎಂದು ಕೇಳಿದ್ದಾರೆ. ಹೇಗೂ ಇದಕ್ಕೆ ಒಂದು ವರ್ಷದ ಅವಧಿ ಇರುತ್ತದೆ. ಆ ಒಂದು ವರ್ಷದ ಅವಧಿಯಲ್ಲಿ ಅವರು ಆ regulation ಅನ್ನು ಏನಾದರೂ ಬದಲಾವಣೆ ಮಾಡಿ, ಅವರಿಗೇ ಅನುಕೂಲವಾಗುತ್ತದೆ ಎಂದರೆ, ಅವರೂ ಕೂಡ ಈ ವ್ಯಾಪ್ತಿಗೆ ಬರುತ್ತಾರೆ. ಆದುದರಿಂದ ಈ ವಿಧೇಯಕವನ್ನು ಅನುಮೋದಿಸಬೇಕೆಂದು ಎಲ್ಲಾ ಮಾನ್ಯ ಸದಸ್ಯರಲ್ಲಿ ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ತನ್ವೀರ್ ಸೇಠ್ : ಈಗಾಗಲೇ ನಮ್ಮ ಮೈಸೂರು ನಗರದಲ್ಲಿಯೇ ಅನೇಕ ಜನರು ಶುಲ್ಕವನ್ನು ಪಾವತಿಸಿದ್ದಾರೆ. ನಗರಪಾಲಿಕೆ ಅವರಿಂದ ಏನು ಶುಲ್ಕವನ್ನು ತೆಗೆದುಕೊಂಡಿದೆ, ಯಾರಿಗೂ ಇವತ್ತಿನವರೆಗೂ ಕಂದಾಯ ಖಾತೆ ಮಾಡಿಕೊಡುವುದಾಗಲೀ ಅಥವಾ ಬೇರೆ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡುವಂಥದ್ದು ಆಗಲಿ, ಯಾವುದನ್ನೂ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಒಂದು ಉದಾಹರಣೆ ಮೈಸೂರು ನಗರದಲ್ಲೇ ಕೊಡಬೇಕಾದರೆ, ವಿಜಯಶ್ರೀಪುರ ಎಂಬಲ್ಲಿ ಎಲ್ಲಾ ಶ್ರೀಮಂತರೇ ಅಲ್ಲಿ ಮನೆ ಕಟ್ಟಿರುವುದು. ಅವರಿಂದಲೂ ಸಹಾ ನಗರಪಾಲಿಕೆ ರಾತ್ರೋರಾತ್ರಿ development charges ಎಂದು ಕಟ್ಟಿಸಿಕೊಂಡು, ಸಕ್ರಮಗೊಳಿಸುವಂಥ ಕಾರ್ಯಕ್ಕೆ ಕೈ ಹಾಕಿದೆ. ಆ ಕಾರಣಕ್ಕಾಗಿ ಹಿಂದೆ Regularization of unauthorized Act ಅನ್ನು ನಾವು ಏನು ತಂದಿದ್ದೇವೆ, ಅದರಲ್ಲಿಯೂ ಸಾಕಷ್ಟು ತೊಡಕುಗಳಿದ್ದಂಥ ಕಾರಣಕ್ಕಾಗಿ ಯಾವುದೇ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಆ ಕಾರಣಕ್ಕಾಗಿ, ಬೆಳಗಾಂ ಅಧಿವೇಶನದಲ್ಲೂ ಇದನ್ನು ವಿರೋಧ ವ್ಯಕ್ತಪಡಿಸಿದ್ದೆವು. ಎರಡೂ ಸದನದಲ್ಲೂ ಒಪ್ಪಿಗೆ ತೆಗೆದುಕೊಂಡು ಘನತೆವೆತ್ತ ರಾಜ್ಯಪಾಲರಿಂದ ತಿರಸ್ಕಾರ ಗೊಂಡು ವಾಪಸ್ಸು ಬಂದಿರುವಂಥದ್ದು ನಮ್ಮ ಮುಂದೆ ಇದೆ. ಆ ಕಾರಣಕ್ಕಾಗಿ ಮಾನ್ಯ ಸಚಿವರು ಹೇಳಬೇಕಾಗುತ್ತದೆ, ಈಗಾಗಲೇ ನಗರಪಾಲಿಕೆಯಲ್ಲಿ ಬಹಳಷ್ಟು ಜನರ ಹತ್ತಿರ ಹಣವನ್ನು ಕಟ್ಟಿಸಿಕೊಂಡಿದ್ದಾರೆ. ಇದು ಯಾವ ರೀತಿ ಯಾರ ಹತ್ತಿರ ಕಟ್ಟಿಸಿಕೊಂಡಿದ್ದಾರೆ ಎನ್ನುವ ದಾಖಲಾತಿ ಅವರ ಹತ್ತಿರ ಇದೆಯೋ ಇಲ್ಲವೋ ಗೊತ್ತಿಲ್ಲ. ಆ ಕಾರಣಕ್ಕಾಗಿ ನಾವು ಯಾವುದೇ ಒಂದು ಕೆಲಸ ಮಾಡಿದರೂ ಸ್ಪಷ್ಟವಾಗಿ ನಮ್ಮ ಹತ್ತಿರ ರೂಪುರೇಷೆಗಳು ಇರಬೇಕು.

ಉಪಾಧ್ಯಕ್ಷರು : Clarification ಇದ್ದರೆ ಕೇಳಿ. ಅದನ್ನು ಆಗಲೇ ಹೇಳಿದ್ದೀರಿ.

ಶ್ರೀ ತನ್ವೀರ್‌ಸೇಠ್ : ಜೊತೆಗೆ ಅಲ್ಲಿ ಆ ಅನಧಿಕೃತ ಬಡಾವಣೆಗಳಲ್ಲಿ, ಒಂದು ಆಸ್ಪತ್ರೆ ಆಗಿರಬಹುದು, ಒಂದು ಶಾಲೆ ಆಗಿರಬಹುದು, ಅದನ್ನು ಮಾಡುವುದು ಹೇಗೆ ಎನ್ನುವುದರ ಬಗ್ಗೆ ನಮ್ಮ ಹತ್ತಿರ ನಕ್ಷೆ ಇರಬೇಕು. ಯಾವ ರಸ್ತೆಗಳನ್ನು ಅಗಲೀಕರಣ ಮಾಡಬೇಕು ಎನ್ನುವುದರ ಬಗ್ಗೆಯೂ ನಮ್ಮ ಹತ್ತಿರ ಕಾರ್ಯಕ್ರಮಗಳು ಇಲ್ಲ. ಆದುದರಿಂದ ಸುಮ್ಮನೆ ಇದನ್ನು ಏಕಾಏಕಿಯಾಗಿ ತಂದರೆ, ತದನಂತರ ನಗರಪಾಲಿಕೆಗಳು ಅದನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿ, ನಾನು ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಇವರು statement of objection reasons ನಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ನೀವು ಏನು ಹೇಳಿದ್ದೀರೆಂದರೆ, unauthorized layouts and sites. Unauthorized layouts ಅಂದರೆ, ಅವೆಲ್ಲವನ್ನೂ ಸೇರಿಸಿ ಮಾಡಿಕೊಡು

ತ್ತೀರಾ? Unauthorized layouts ಅನ್ನು ಮಾಡಿರುವವರು ಯಾರು? ರೈತರಿಗೆ ಅಥವಾ ಜಮೀನ್ದಾರರಿಗೆ ಕೊಟ್ಟಿದ್ದಾರಾ? The owner of the land, ಯಾರ ಹತ್ತಿರ title deed, ownership ಇದೆ, ಅವರು ಮಾಡಿ ಕೊಟ್ಟಿದ್ದಾರಾ? No, Unauthorized layouts ಅನ್ನು ಯಾರೋ ಮಾಡಿರು ತ್ತಾರೆ. ಮಧ್ಯದಲ್ಲಿ ದಲ್ಲಾಳಿ, ಜೊತೆಗೆ land grabber, ಈ ತರಹ ಮಾಡಿದರೆ, ಅವನಿಗೆ regularize ಮಾಡಿಕೊಡುತ್ತೀರಾ? Is it the intention of the Government to help the land grabber? Unauthorized layout ಮಾಡಿರುವವರಿಗೆ ಸಹಾಯ ಮಾಡಬೇಕೆನ್ನುವುದು ನಿಮ್ಮ ಉದ್ದೇಶವೇ? ಬಡವರಿಗೆ ಮಾಡಿಕೊಡುವುದು ಸರಿ. ನಾವು ವಿರೋಧ ಮಾಡುವುದಿಲ್ಲ. We are also agreeable ಯಾರು ಪಾಪ ಬಡವರು, ಮನೆಯಿಲ್ಲದವರು, ಬಡತನದಲ್ಲಿರುತ್ತಾರೆ, ಅವರಿಗೆ ಬೆಂಗಳೂರು ನಗರದಲ್ಲಿ ಅಥವಾ ಮೈಸೂರು, ಹುಬ್ಬಳ್ಳಿನಗರ ಇನ್ಯಾವುದೇ ಕಡೆಗಳಲ್ಲಿ ಸೂರಿಲ್ಲ ಅಂದರೆ, I can understand. ಆದರೆ, ಯಾರಿಗೋ ಲೇಔಟ್ ಮಾಡಿಕೊಟ್ಟ ವರಿಗೂ ಕೂಡ, ಅಲ್ಲಿ ತೆಗೆದುಕೊಂಡಿರುವವರಿಗೂ illegal ಆಗಿ ಕೊಟ್ಟರೆ, are you going to regularize it? This should not be the intention of the Government. ಇದನ್ನು ಮಾಡುವುದಕ್ಕಾಗುವುದಿಲ್ಲ ಅಂದ ಮೇಲೆ, how many unauthorized layouts are there in Bangalore city? Who are those persons? ಯಾರ ಹತ್ತಿರ ಇವರು ತೆಗೆದುಕೊಂಡು ಮನೆಯನ್ನು ಕಟ್ಟಿದ್ದಾರೆ? ಯಾರು ಈ ತರಹದ್ದು ಸೈಟ್ ಕೊಟ್ಟಿದ್ದಾರೆ? ಆ ವ್ಯಕ್ತಿಗಳು ಯಾರು? ಬೆಂಗಳೂರು, ಹುಬ್ಬಳ್ಳಿ ಧಾರವಾಡ, ಮೈಸೂರು, ಮಂಗಳೂರು, ಉಡುಪಿ, ಬೆಳಗಾಂ, ಗುಲ್ಬರ್ಗಾ, ತುಮಕೂರಿನಲ್ಲಿ ಈ ತರಹದ್ದು ಎಷ್ಟಿವೆ ಎನ್ನುವುದನ್ನು ಹೇಳಿ. ಸುಮ್ಮನೆ ಸಾರಾಸಗಟಾಗಿ ಬಡವರ ಹೆಸರಿನಲ್ಲಿ ಯಾರೋ ಲೇಔಟ್ ಮಾಡಿಕೊಟ್ಟಂಥವರಿಗೆ. ಅವರಿಗೆ ಸಹಾಯ ಮಾಡ ಬಾರದು. ಅದು ಸರ್ಕಾರದ ಉದ್ದೇಶವೂ ಆಗಬಾರದು. ಬಡವರಿಗೆ ಕೊಡುವುದಾದರೆ, ನಮ್ಮದೇನೂ ಅಭ್ಯಂತರವಿಲ್ಲ. ಎಲ್ಲಾ ಬಡವರು ಯಾರ್ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ರೈತರ ಹತ್ತಿರ ತೆಗೆದುಕೊಂಡು ಕಟ್ಟಿಕೊಂಡಿದ್ದಾರೆ. Agriculture land ನಲ್ಲಿ ಕಟ್ಟಿಕೊಂಡಿದ್ದಾರೆ, ಅಂಥವರಿಗೆ ಮಾಡಿಕೊಡಿ. ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಲೇಔಟ್ ಮಾಡಿ,

ಸೈಟ್‌ಗಳನ್ನು ಮಾರಿಕೊಂಡು ಹೋದರೆ, ಛಾಪಾ ಕಾಗದದಲ್ಲಿ ಸರ್ಕಾರಕ್ಕೆ ಸ್ಟಾಂಪ್ ಡ್ಯೂಟಿಯನ್ನೂ ಕೊಟ್ಟಿಲ್ಲ, conversion ಮಾಡಿಲ್ಲ, ಅಮಾಯಕ ಜನರ ಹತ್ತಿರ ಹಣವನ್ನು ಅವನು ದೋಚಿಕೊಂಡು ಹೋದರೆ, wrongful gain ಮಾಡಿಕೊಂಡಿರುವವನಿಗೆ help ಮಾಡುತ್ತೀರಾ? Illegal act commit ಮಾಡಿರುವವನಿಗೆ ನೀವು ಸಹಾಯ ಮಾಡುತ್ತೀರಾ? He is punishable under law. On the other hand ಅಂಥವರಿಗೆಲ್ಲಾ penal clause ಅಡಿಯಲ್ಲಿ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆ. That is why, we are opposing. ಬಡವರಿಗೋಸ್ಕರ ವಿರೋಧ ಮಾಡುತ್ತಿದ್ದಾರೆಂದು ಯಾರೂ ಹೇಳಬಾರದು. ಬಡವರಿಗೋಸ್ಕರ ಈ ತರಹದ್ದು ಎಲ್ಲೆಲ್ಲಿ ಮಾಡಿದ್ದಾರೆ ಅವೆಲ್ಲದ್ದಕ್ಕೂ ನಮ್ಮ ವಿರೋಧವಿಲ್ಲ. ಕೇವಲ ನೀವು ಬಡವರಿಗೋಸ್ಕರ ಮಾಡುತ್ತಿಲ್ಲ. Illegal layout ಅಂದರೇನು? ಲೇಔಟ್ ಅನ್ನು ಯಾರು ಮಾಡುವುದು? ಲೇಔಟ್ ಅನ್ನು ರೈತರು ಅಥವಾ ಜಮೀನ್ದಾರರು ಮಾಡಿದ್ದಾರೆಯೇ? ಯಾವುದನ್ನೂ ರೈತರು ಮಾಡಿರುವುದಿಲ್ಲ. ಅವರಿಗೆಲ್ಲಾ ಮಾಡಿಕೊಡುತ್ತೀರಾ? ನಾನು ರಾಜಕೀಯವಾಗಿ ಹೇಳುತ್ತಿಲ್ಲ. We should not help, ಯಾರೋ real estate ಮಾಡುವವರಿಗೆ, layout ಮಾಡಿ ಮಾರಾಟ ಮಾಡುವವರಿಗೆ, illegal ಆಗಿ ಮಾಡುವವರಿಗೆ conversion ಇಲ್ಲದೇ ಜಮೀನು ತೆಗೆದುಕೊಂಡು, ಬಡವರಿಗೆ ಕೊಟ್ಟಿದ್ದೇನೆಂದು ಮಾಡಿಬಿಟ್ಟು ಹೊದರೆ ಹೇಗೆ? ಮೈಸೂರಿಗೆ ನೀವು ಬನ್ನಿ, ಬೇಕಾದರೆ, ಮೈಸೂರಿನಲ್ಲಿ ಬೇಕಾದಷ್ಟು ಜನ unauthorized layout ನಲ್ಲಿ 4 ಸೈಟ್, 5 ಸೈಟ್, 6 ಸೈಟ್ ಮಾಡಿಕೊಂಡಿ ರುವುದನ್ನು ತೋರಿಸುತ್ತೇನೆ. ಅವನು ಸ್ವಂತ ಮನೆ ಎಲ್ಲೋ ಕಟ್ಟಿಕೊಂಡಿರುತ್ತಾನೆ, ಸೈಟ್ ತೆಗೆದು ಕಟ್ಟಿಬಿಟ್ಟು ಬಾಡಿಗೆಗೆ ಕೊಟ್ಟಿರುತ್ತಾನೆ. ಛಾಪಾ ಕಾಗದದಲ್ಲಿ ಬರೆದುಕೊಟ್ಟಿರುತ್ತಾನೆ. ಅವರಿಗೂ ನೀವು ಸಹಾಯ ಮಾಡುತ್ತೀರಾ? ಆದುದರಿಂದ ನಾನು ಹೇಳುತ್ತಿರುವುದೇನೆಂದರೆ, ಇನ್ನೊಂದು ಸಲ ಸರ್ವೆ ಮಾಡಿಸಿ, ಆಕಾಶವೇನು ಬೀಳುವುದಿಲ್ಲ. ಬಡವರಿಗೆ ಸಹಾಯ ಮಾಡೋಣ. We are also for it. We are also for the poor. ಈ ಮಸೂದೆಯನ್ನು Joint select committee ಗೆ ಕೊಡಿ. ಅದರಲ್ಲಿ prestige ಕಳೆದುಕೊಳ್ಳುವುದು ಏನು? What is that you are going to lose. We are not opposing regularized for the poor people our

only objection, our opposition is ಲೇಔಟ್ ಮಾಡಿ ಬಿಟ್ಟಿರುವವರಿಗೆ ಅನುಕೂಲ ಆಗಬಾರದು. ಅವರಿಗೆ ಸಹಾಯ ವಾಗಬಾರದು. That is the only objection, ಬಡವರಿಗೆ, ಅಮಾಯಕರಿಗೆ, ಮನೆ ಇಲ್ಲದವರಿಗೆ ತೊಂದರೆಯಾಗಬೇಕು ಎನ್ನುವುದಲ್ಲ. ಅವರಿಗೆ ಸಹಾಯ ಮಾಡಬೇಕು. once for all, ಇದನ್ನು one time ಗೆ ಎಂದು ಮಾಡಿ. ಇದನ್ನು ಪದೇ ಪದೇ ಎಲ್ಲೂ ಮಾಡುವುದಕ್ಕೆ ಹೋಗಬಾರದು. ಏಕೆಂದರೆ, ಇದು ಅವ್ಯಾಹತ ವಾಗಿ ನಡೆಯುತ್ತಲೇ ಇರುತ್ತದೆ. ನನಗೆ ತಿಳಿದ ಮಟ್ಟಿಗೆ ಮೈಸೂರಿ ನಲ್ಲಿ ಸುಮಾರು 1979–80 ರಿಂದ ಪ್ರಾರಂಭವಾಯಿತು. ಇವತ್ತಿನವರೆಗೂ ನಿಂತಿಲ್ಲ. ಇವತ್ತು ಯಾರೂ ಕೂಡ ಅದನ್ನು ತಡೆಯುತ್ತಿಲ್ಲ. Even today it is going on. ಎಲ್ಲರಿಗೂ ಗೊತ್ತಿರುತ್ತದೆ. ಅಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರರಿಗೆ, ಮುನಿಸಿಪಲ್ ಆಫೀಸರ್ಸ್‌ಗೆ, ಎಂಜಿನಿಯರ್ಸ್‌ಗೆ ಗೊತ್ತಿರುತ್ತದೆ. Everybody knows it, but it is going on. That is why, strict ಆಗಿ ಇನ್ನು ಮುಂದೆ ಡಿಸೆಂಬರ್ 2008 ಅಲ್ಲಿಂದ ಮುಂದಕ್ಕೆ ಮಾಡುವುದು ಬೇಡ. ಆಯಿತು, ಅಲ್ಲಿಗೆ ಕಟ್ ಆಫ್ ಡೇಟ್ ಹಾಕಿದ್ದೀರಿ, ಅದು ಒಂದು. ಎರಡನೆ ಯದಾಗಿ, ಸರ್ವೆ ಮಾಡಿಸಿ, ಆಕಾಶ ಕಳಚಿ ಏನೂ ಪ್ರಳಯವಾಗುವುದಿಲ್ಲ. ಅವರನ್ನು ನಾವೇನೂ ಒಕ್ಕಲೆಬ್ಬಿಸುವುದಿಲ್ಲ. ಅವರಿಗೆ evict ಮಾಡಿಸುವುದಕ್ಕೆ ಹೋಗುವುದಿಲ್ಲ. They will continue in position.. ಆ ಕಾರಣದಿಂದ ಇದರಿಂದ ಅನ್ಯಾಯವಾಗುವುದಿಲ್ಲ. ಇದನ್ನು Joint Select Committee ಗೆ ವಹಿಸಿಕೊಡಿ. ಇದರ ಬಗ್ಗೆ ವಿವರವಾಗಿ ಚರ್ಚೆಯಾಗಲಿ, ಅನಂತರ, ತೆಗೆದುಕೊಂಡು ಬನ್ನಿ, ಪಾಸ್ ಮಾಡೋಣ.

ಶ್ರೀ ಶ್ರೀಶೈಲಪ್ಪ ಬಿದರೂರು : ಮಾನ್ಯ ಉಪಾಧ್ಯಕ್ಷರೆ, ವಾಸ್ತವವಾಗಿ ಬಹಳಷ್ಟು ಕಡೆ ಸಣ್ಣ ಸಣ್ಣ ಪಟ್ಟಣಗಳಲ್ಲಿ ಶಹರಗಳಲ್ಲಿ ಈ ಸಮಸ್ಯೆ ಇದೆ. ಅನಧಿಕೃತವಾಗಿ ಲೇಔಟ್‌ಗಳನ್ನು ಯಾರು ನಿರ್ಮಾಣ ಮಾಡಿದ್ದಾರೋ, ಅವರನ್ನು ಶಿಕ್ಷಿಸಬೇಕಾದ ಅವಶ್ಯಕತೆ ಇದೆಯೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ, ಇಂತಹ ಅನಧಿಕೃತ ಲೇಔಟ್‌ಗಳಲ್ಲಿ ಫ್ಲಾಟುಗಳನ್ನು ಪಡೆದವರು ಎಂತಹವರಿದ್ದಾರೆಂದರೆ, ಅವರು ನಿರ್ಗತಿಕ ಫಲಾನುಭವಿಗಳು. ಆ ಫ್ಲಾಟು ಗಳನ್ನು ತೆಗೆದುಕೊಂಡು ಕಾನೂನಿನ ರೀತ್ಯಾ ತುಂಡು ಭೂಮಿ ಖರೀದಿಸುವ ಪ್ರಕ್ರಿಯೆ ಏನಿತ್ತು, ಆಗ ಐದು, ಹತ್ತು ಗುಂಟೆಯಲ್ಲಿ ಫ್ಲಾಟುಗಳನ್ನು ನಿರ್ಮಿಸಿ,

ಬಳಿಕ ಮಾರಾಟ ಮಾಡಿದ್ದಾರೆ. ಬಹುಶಃ, ಗದಗದಂತಹ ನಗರದಲ್ಲಿ ಇಂತಹ ಸುಮಾರು 45 ಅನಧಿಕೃತ ಲೇಔಟ್‌ಗಳಿವೆ ಎಂಬುದು ಮೊನ್ನೆ ಸರ್ವೆ ಮಾಡಿಸಿದಾಗ ಕಂಡು ಬಂದಿದೆ. ಈ ಅನಧಿಕೃತ ಲೇಔಟ್‌ಗಳಿಂದ ಸರ್ಕಾರಕ್ಕೆ ಯಾವುದೇ ರೀತಿಯಲ್ಲೂ ಒಂದು ಪೈಸೆಯಷ್ಟು ಹಣ ಸಂದಾಯವಾಗಿಲ್ಲ. ಇಲ್ಲಿಗೆ ಸರ್ಕಾರ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಇಲ್ಲದಿದ್ದರೆ, ಪುನಃ ನಗರಸಭೆಗೆ ಇದು ದೊಡ್ಡ ಹೊರೆಯಾಗಿ ಪರಿಣಮಿಸುತ್ತದೆ. ಆದುದರಿಂದ, ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಗಳನ್ನು ಒದಗಿಸಿಕೊಡಬೇಕು. ಯಾವ ಡೆವಲಪರ್ ಇದನ್ನು ಡೆವಲಪ್ ಮಾಡಿದ್ದಾನೋ, ಮೊದಲು ಅವನನ್ನು ನಿಯಂತ್ರಿಸಬೇಕಾದ ಅವಶ್ಯಕತೆ ಇದೆ. ಇದರ ಬಗ್ಗೆ ಚಿಂತನೆಯಾಗಬೇಕು. ಇದರ ಬಗ್ಗೆ ಒಂದು ಸ್ಪಷ್ಟ ಧೋರಣೆ ತಳೆಯಬೇಕೆಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ಗದಗ ನಗರದಲ್ಲಿ 45 ಅನಧಿಕೃತ ಲೇಔಟ್‌ಗಳನ್ನು ಮಾಡಿದ್ದಾರೆಂದು ಆಡಳಿತ ಪಕ್ಷದ ಸದಸ್ಯರೇ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು : ಅವರ ಅಭಿಪ್ರಾಯ ವ್ಯಕ್ತಪಡಿಸಿದರು.

ಶ್ರೀ ಹೆಚ್.ಡಿ.ರೇವಣ್ಣ : ಅವರೇ ಹೇಳುತ್ತಿದ್ದಾರೆ. ಗದಗದಲ್ಲಿ Illegal layouts ಅನ್ನು ಮಾಡುತ್ತಿದ್ದಾರೆಂದು ಆಡಳಿತ ಪಕ್ಷದ ಸದಸ್ಯರೇ ಹೇಳುತ್ತಿದ್ದಾರೆ. ನಾವು ಹೇಳುತ್ತಿಲ್ಲ. ಲೇಔಟ್‌ಗಳನ್ನು ದಂಧೆ ಮಾಡಿಕೊಳ್ಳಲು ಅವರಿಗೆ ಅನುಕೂಲ ಮಾಡಿಕೊಟ್ಟಂತಾಯಿತೆಂದು ಆಡಳಿತ ಪಕ್ಷದ ಸದಸ್ಯರು ಏನು ಹೇಳುತ್ತಿದ್ದಾರೆ, ಯಾರ್‍ಯಾರೋ ಬಡಾವಣೆಗಳನ್ನು ನಿರ್ಮಿಸಿದವರಿಗೆ ಇದರಿಂದ ಅನುಕೂಲವಾಗುತ್ತದೆಯೇ ಹೊರತು....

ಶ್ರೀ ಹೆಚ್.ಸಿ.ಬಾಲಕೃಷ್ಣ : ಇಲ್ಲಿ ಅನುಮಾನ ಬರಲು ಕಾರಣವೇನೆಂದರೆ, ಇಲ್ಲಿ ಪುರಸಭೆ ಇಲ್ಲ. ಪುರಸಭೆ ವ್ಯಾಪ್ತಿಯಲ್ಲಿ ಲೇಔಟ್ ಪಕ್ಕದ ಸೈಟುಗಳಲ್ಲಿ ಬಡವರು ಮನೆಗಳನ್ನು ಕಟ್ಟಿಕೊಂಡಿಲ್ಲವೇ? ಅದನ್ನು ಸೇರಿಸುವುದು ಬೇರೆ ವಿಚಾರ. Revenue sites in Un-authorized layouts and sites in the approved, but undeveloped layouts particularly in and around the Bangalore City. ಅಂದರೆ ಅರ್ಥವೇನು? ಮನೆ ಕಟ್ಟಿರುವವರಿಗೆ ರೆಗ್ಯುಲರೈಸ್ ಮಾಡಿ ಎಂದರೆ ನೀವು ಕೇಳುವುದಿಲ್ಲ. ಸೈಟುಗಳನ್ನು ನೀವು ರೆಗ್ಯುಲರೈಸ್ ಮಾಡಲು ಹೊರಟರೆ

ಹೇಗೆ? ಅವನು ಅಲ್ಲಿ ಸರಿಯಾಗಿ ನೀರಿನ ಸೌಕರ್ಯ ಕಲ್ಪಿಸಿಕೊಟ್ಟಿದ್ದಾನೆಯೇ? ರಸ್ತೆ ನಿರ್ಮಿಸಿದ್ದಾನೆಯೇ? ಸಿ.ಎ.ಗೆ. ಜಾಗ ಬಿಟ್ಟಿದ್ದಾನೆಯೇ? ಇದ್ಯಾವುದನ್ನೂ ತಿಳಿದುಕೊಳ್ಳದೇ ಈ ಕಾನೂನಿನಡಿಯಲ್ಲಿ ರಿಯಲ್ ಎಸ್ಟೇಟ್ ಏಜೆಂಟರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅದಕ್ಕೋಸ್ಕರ ಅವರಿಗೆ ಟೈಮ್ ಕೊಟ್ಟು, ಕಂಡೀಷನ್ ವಿಧಿಸಿ, ಅಪ್ಲಿಕೇಷನ್ ಕರೆದು, ಮಾಹಿತಿಗಳನ್ನು ತೆಗೆದುಕೊಂಡು ಅನಂತರ ತನ್ನಿ. ಇದನ್ನು ತರಾತುರಿಯಲ್ಲಿ ಏಕೆ ಮಾಡಬೇಕು? ಈಗ ಬರೀ ಮನೆ ಕಟ್ಟುವ ಉದ್ದೇಶವಿದ್ದರೆ, ಮನೆಗೋಸ್ಕರ ಮಾಡಿ. ಈಗ ನೀವು ಲೇಔಟ್‌ಗಳಿಗೆ, ಸೈಟ್‌ಗಳಿಗೆ, ಹೀಗೆ ಎಲ್ಲದಕ್ಕೂ ಮಾಡಲು ಹೊರಟಿದ್ದೀರಿ. ಆದುದರಿಂದ, ಇದನ್ನು Joint Select Committee ಗೆ ವಹಿಸಿಕೊಡಬೇಕು.

ಶ್ರೀ ಸಿದ್ದರಾಮಯ್ಯ : Un-authorized layouts and sites ಎಂದು ಹೇಳುತ್ತೀರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದನ್ನು ಇವತ್ತು ಇವರೇನಾದರೂ ಜಾರಿಗೆ ತಂದರೆ ನಾಳೆ Un-authorized layouts ಮತ್ತಷ್ಟು ಜಾಸ್ತಿಯಾಗುತ್ತವೆ. ಎಷ್ಟು ಲೇಔಟ್‌ಗಳು, ಸೈಟ್‌ಗಳಿವೆ ಎಂಬ ಬಗ್ಗೆ ಈಗ ನಿಮ್ಮ ಬಳಿ ಮಾಹಿತಿ ಇಲ್ಲ. ಸುಮ್ಮನೆ 3 ರಿಂದ 5 ಲಕ್ಷ ಎಂದು ಹೇಳಿದ್ದೀರಿ. ಇದರ ಬಗ್ಗೆ ಸರ್ವೆ ಮಾಡಿ. ಈಗ ಇದರಿಂದ ಸೈಟ್ ಮತ್ತು ಲೇಔಟ್‌ಗಳು ಎಂದು ಇರುವುದನ್ನು ತೆಗೆದು, ಮನೆಗಳನ್ನು ಯಾರು ಕಟ್ಟಿಕೊಂಡಿದ್ದಾರೋ, ಅವರಿಗೆ ಕೊಡಿ. ಇವತ್ತೇ ಕೊಡಿ, ನಾನ್ಯಾರು ಅದರ ಬಗ್ಗೆ ಕೇಳುವುದಿಲ್ಲ. ಬಡವರು ಮನೆಗಳನ್ನು ಕಟ್ಟಿಕೊಂಡರೆ ನಮ್ಮದೇನೂ ತಕರಾರಿಲ್ಲ. ಅದನ್ನು ಇವತ್ತೇ ಕೊಡಿ. ಲೇಔಟ್ಸ್, ಸೈಟ್ಸ್ ಎಂದು ಇರುವುದನ್ನು ತೆಗೆಯಿರಿ. ನಿಮ್ಮ ಪಕ್ಷದ ಸದಸ್ಯರೇ ಗದಗದಲ್ಲಿ ಯಾವ ರೀತಿ un-authorized sites ಮಾಡುತ್ತಿದ್ದಾರೆಂಬುದನ್ನು ಹೇಳಿದರು. ಆದುದರಿಂದ, ಇದನ್ನು Joint Select Committee ಗೆ ವಹಿಸಿ, ಸರಿಯಾದ ತಿದ್ದುಪಡಿ ಮಾಡಿ ಅನಂತರ ಸದನದಲ್ಲಿ ಮಂಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭದಲ್ಲಿ ಯಾವ ಮಾತನ್ನು ಹೇಳಿದರೋ, ಅದೇ ವಿಚಾರವನ್ನು ಮತ್ತೆ ಹೇಳಿದ್ದಾರೆಯೇ ಹೊರತು ಹೊಸದಾಗಿ ಏನೂ ಹೇಳಿಲ್ಲ. ನಿಮ್ಮ (ಸಿದ್ದರಾಮಯ್ಯ) ಉದ್ದೇಶ ತಪ್ಪು ಎಂದು ನಾನು ಹೇಳುತ್ತಿಲ್ಲ. ಕೇವಲ

ಲೇಔಟ್‌ಗಳನ್ನು ಮಾಡಿರುವವರಿಗೆ ಇದರಿಂದ ಅನುಕೂಲವಾಗುತ್ತಿದೆ, ಬಡವರು ಹೇಗೋ ಡೆವಲಪ್ ಮಾಡಿ, un-authorized ಆಗಿ ರಸ್ತೆ ನಿರ್ಮಿಸಿ, ಮಾರಾಟ ಮಾಡಿ ಹೊರಟು ಹೋಗಿದ್ದಾರೆ. ಅದಕ್ಕೋಸ್ಕರವೇ Purchasers are the sufferers ಎಂದು ಹೇಳಿದ್ದು. ಇವತ್ತು ಇದು ಆಗಿಬಿಟ್ಟಿದೆ. ಘಟನೆ ಆಗಿದೆ. ಅಂದರೆ, ಯಾರೋ X,Y,Z ಆದವರು ಲೇಔಟ್ಸ್ ಮಾಡಿದ್ದಾರೆ, ಮಾರಾಟ ಮಾಡಿದ್ದಾರೆ, ಯಾರೋ ಒಬ್ಬರು ತೆಗೆದುಕೊಂಡಿದ್ದಾರೆ. ಏನೋ ಕಡಿಮೆ ರೇಟಿಗೆ ಸಿಕ್ಕಿದೆ ಎಂಬ ಒಂದು ಆಸೆಯಿಂದ ಆತ ತೆಗೆದುಕೊಂಡಿದ್ದಾನೆ. ಇದು ಆಗಿಬಿಟ್ಟಿದೆ. ಇದರಿಂದ ಬಡವರಿಗೆ, ಮಧ್ಯಮ ವರ್ಗದವರಿಗೆ ಅನುಕೂಲ ವಾಗಲೆಂಬ ಉದ್ದೇಶದಿಂದ ತಂದಿದ್ದೇವೆಯೇ ಹೊರತು ಯಾರೋ ಒಬ್ಬರಿಗೆ ಅನುಕೂಲ ಮಾಡಿಕೊಡ ಬೇಕು, ಉಪಯೋಗ ಮಾಡಿಕೊಡಬೇಕೆಂಬ ಉದ್ದೇಶ ನಮ್ಮಲ್ಲಿ ಪ್ರಾಮಾಣಿಕ ವಾಗಿಯೂ ಇಲ್ಲ, ಪ್ರಮಾಣಪೂರ್ವಕವಾಗಿ ಅಂತಹ ಉದ್ದೇಶವೇ ಇಲ್ಲ. ತಮಗಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, un-authorized layouts ಮಾಡಿರುವವರಿಗೆ punishment ಏನು? ಅವರು ಹೊರಟು ಹೋಗುವುದೇ? ಬಡವರಿಗೆ ಸಹಾಯ ಮಾಡುವುದು ಬೇರೆ. 100 ಎಕರೆ ತೆಗೆದುಕೊಂಡು un-authorized layouts ಮಾಡಿಬಿಟ್ಟಿರುತ್ತಾನೆ. ಇದಕ್ಕೆ stamp duty ಕಟ್ಟಿರುವುದಿಲ್ಲ, ಪ್ಲಾನ್ ಇಲ್ಲ, ಕನ್‌ವರ್ಶನ್ ಇಲ್ಲ, ಅಲ್ಲಿ civic amenities ಇಲ್ಲ, ಶಾಲೆ ಮತ್ತು ಆಸ್ಪತ್ರೆಗಳಿಗೆ ಜಾಗವಿಲ್ಲ. ಈ ರೀತಿ ಏನೂ ಇಲ್ಲದೇ ಆತ 100 ಎಕರೆಯಲ್ಲಿ ದುಡ್ಡು ಹೊಡೆದುಕೊಂಡು ಹೊರಟು ಹೋಗಿದ್ದಾನೆ. ಆತನಿಗೆ ನೀವು ಸಹಾಯ ಮಾಡುತ್ತೀರಾ? ತಂದಿರುವ ತಿದ್ದುಪಡಿ ವಿಧೇಯ ಕದಲ್ಲಿ 'ಮನೆಗಳು' ಎಂತಲೂ ತಿಳಿಸಿಲ್ಲ. Un-authorized layouts and sites ಎಂದು objections and reasons ನಲ್ಲಿ ಬಹಳ specific ಆಗಿ ಬರೆದಿದ್ದೀರಿ. Who are going to be benefited? Not only poor people, there is a big racket in Bengaluru. All these people are going to be benefited. They will be scot-free. There will be no action against them. ಕ್ರಿಮಿನಲ್ ಆ್ಯಕ್ಟ್ ಇರುವಾಗ ನೀವೆಲ್ಲರೂ ಬಡವರು, ತೆಗೆದುಕೊಂಡು ಬಿಟ್ಟಿದ್ದೀರಿ, ಪಾಪ! ನೀವೆಲ್ಲರೂ ಹೊರಟು ಹೋಗಿ ಎಂದು

ಅವರನ್ನೆಲ್ಲಾ....ಮತ್ತು ಅದು ಬಡವರ ಹೆಸರಿನಲ್ಲಿ ಇರಲಿ ಎಂದು....ಬಡವರಿಗೆ ಮಾಡುವುದು ಬೇರೆ. ಬಡವರಿಗೆ ಅನುಕೂಲ ಮಾಡಿ, What are you going to do? ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಮಾಡಿ, ಲೇಔಟ್‌ಗಳನ್ನು ಮಾಡಿರುವವರಿಗೆ ಬಿಟ್ಟುಬಿಡಿ. Agriculture land ನಲ್ಲಿ ಯಾರ್‍ಯಾರು ಮನೆಗಳನ್ನು ಕಟ್ಟಿಕೊಂಡಿದ್ದಾರೋ, ರೈತರಿಂದ ಅಥವಾ owner ಗಳಿಂದ ಯಾರು ತೆಗೆದುಕೊಂಡಿದ್ದಾರೋ, ಅವರಿಗೆ ಅನುಕೂಲ ಮಾಡಿಕೊಡಿ. OK. we have no objection.

ಶ್ರೀ ಎಸ್.ಸುರೇಶ್ ಕುಮಾರ್ : ತಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. There are two aspects. ಒಬ್ಬ ಲೇಔಟ್ ಅನ್ನು un-authorized ಆಗಿ ಅದನ್ನೇ ಒಂದು ದಂಧೆಯನ್ನಾಗಿಸಿಕೊಂಡಿರುವುದು. What about that gullible purchasers? ಇವತ್ತು ಬಿ.ಡಿ.ಎ.ಯಿಂದ ಎಷ್ಟು ಸೈಟ್‌ಗಳನ್ನು ಕೊಡುತ್ತಿದ್ದಾರೆಂಬುದು ನಮಗೆ ಗೊತ್ತು. ಎಷ್ಟು ಕೊಡಲು ಸಾಧ್ಯ, ಎಷ್ಟು ಕೊಡುತ್ತಿದ್ದಾರೆ, ಎಷ್ಟು ಜನರಿಗೆ ಸಿಗುತ್ತದೆಂಬುದು ಗೊತ್ತಿದೆ. So, what about those gullible purchasers? Absolutely, without any alternative, they have gone and purchased those sites. ಅವರ ಕತೆ ಏನು?

SRI SIDDARAMAIAH : My point is, ನಾನು ಏನು ಹೇಳುತ್ತೇನೆಂದರೆ, ಅಲ್ಲಿ ಕಟ್ಟಿರುವವರೆಲ್ಲಾ ಬಡವರೇ ಎಂದು ನಾನು ಹೇಳುವುದಿಲ್ಲ. ಸೈಟುಗಳನ್ನು ತೆಗೆದುಕೊಂಡಿರುವವರೆಲ್ಲರೂ ಬಡವರೇ ಎಂದಲ್ಲ.

SRI S. SURESH KUMAR : Let us come to some understanding. ಇವತ್ತು ಬಡವರು ಎಂದರೆ ಯಾರು? ಇವತ್ತು lower and middle classes ಇವೆ. ಒಂದು ಮನೆ ಕಟ್ಟಿಕೊಳ್ಳಬೇಕೆಂದು ಅವರಿಗೊಂದು ಹಂಬಲ ಇರುತ್ತದೆ.

ಶ್ರೀ ಸಿದ್ದರಾಮಯ್ಯ : ಆ ತರಹ ಮಾಡುವುದಕ್ಕೆ ಹೋದರೆ ಸೈಟುಗಳನ್ನು ಹಂಚುವುದೇ ಬೇಡ. ಆ ತರಹ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಸರ್ಕಾರವೇನಾದರೂ ಆ ತರಹದ ಉದ್ದೇಶವಿಟ್ಟುಕೊಂಡಿದ್ದರೆ, it is not the intention of the Government to help the poor people.

SRI S. SURESH KUMER : Just I am asking.

SRI SIDDARAMAIAH : No, if you are of the opinion..., ಅವರು ಲೇಔಟ್ ಮಾಡಿದ್ದಾರೆ, ಇವರು ತೆಗೆದುಕೊಂಡಿದ್ದಾರೆ, ಅದಕ್ಕೋಸ್ಕರ ಇದು ಬೇಡವೆಂದು ಹೇಳುವುದಕ್ಕಾಗುವುದಿಲ್ಲ. ಅವನಿಗೆ ಸಹಾಯ ಮಾಡಬೇಕೆಂದೇನಿಲ್ಲ. ಇಂತಹವರಿಗೆ ಸಹಾಯ ಮಾಡಬೇಕೆಂದೇನಿಲ್ಲ. ಲೇಔಟ್ ಎಂಬುದೇ ಒಂದು ಮೋಸ. ಸರ್ಕಾರಕ್ಕೆ ಮೋಸ, ರೈತರಿಗೆ ಮೋಸ, ಎಲ್ಲದಕ್ಕೂ ಮೋಸ, ಸ್ಟಾಂಪ್ ಡ್ಯೂಟಿ ಕಟ್ಟದೇ ಲೇಔಟ್ ಮಾಡಿರುವವರಿಗೆ ನೀವು ಸಹಾಯ ಮಾಡುತ್ತೀರಾ?

ಶ್ರೀ ಟಿ. ಬಿ. ಜಯಚಂದ್ರ : ಇದು one time ಎಂದು ಹೇಳಿ ನೀವು ಈ ವಿಧೇಯಕವನ್ನು ತಂದಿದ್ದೀರಿ. ಇದು ಮುಂದುವರಿಯುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸುರೇಶ್‌ಕುಮಾರ್‌ರವರು ಮಾತನಾಡುತ್ತಾ, ಕಟ್ಟಕಡೆಯ ಮನುಷ್ಯನಿಗೆ ತೊಂದರೆಯಾಗಿದೆಯಲ್ಲ, ಹಾಗಾದರೆ, ಏನು ಮಾಡಬೇಕು? ಎಂದರು. ನಾವು ಏಕೆ Joint Select Committee ಗೆ ವಹಿಸಬೇಕೆಂದು ಹೇಳುತ್ತೇವೆಂದರೆ, ಯಾರು Power of Attorney ಮೇಲೆ ಇವತ್ತು ಕುಳಿತುಕೊಂಡು registered, unregistered ಎಂದು ಎಲ್ಲವನ್ನೂ ಮಾಡಿದರಲ್ಲ, ಅವರನ್ನು ಜೈಲಿನೊಳಕ್ಕೆ ಹಾಕುವ ಕಾನೂನನ್ನು ಇದರಲ್ಲಿ ತರಬೇಕಾಗಿತ್ತು. ಇದು ಮುಂದೆ ಇದು ರಿಪೀಟ್ ಆಗುವುದಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ? Joint Select Committee ಗೆ ಏಕೆ ವಹಿಸಬೇಕೆಂದು, ಆ ಸಮಿತಿಗೆ ವಹಿಸಿದರೆ ಇವೆಲ್ಲಾ ಸಲಹೆಗಳು ಬರುತ್ತವೆ. ಸಲಹೆಗಳು ಬಂದ ಬಳಿಕ ನೀವು ಸದನದಲ್ಲಿ ಬಿಲ್ ಮಂಡಿಸಿದರೆ ನಮ್ಮದೇನೂ objection ಇಲ್ಲ. ಈಗ ಆಯಿತು, ಒಂದು ಸಲ ನಾವು ಮಾಡಬೇಕು. ಆದರೆ, ಇನ್ನು ಮುಂದೆ ಆಗುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು? At least, ನೀವು ಒಂದು legislation ತರಬೇಕೆಂದಾಗ ಈಗ one time ತಂದಿದ್ದೇವೆ. ಇನ್ನು ಮುಂದೆ ನಾವು ತರಲು ಸಾಧ್ಯವಿಲ್ಲ ಎನ್ನುವ ರೀತಿಯಲ್ಲಿ ನೀವು legislation ತಂದರೆ there is something.

(9-00 PM)

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ಆದ್ದರಿಂದ Joint Select Committeeಗೆ ರೆಫರ್ ಮಾಡಿದರೆ ಎಲ್ಲದಕ್ಕೂ ಪರಿಹಾರ ಸಿಗುತ್ತದೆ.

ಶ್ರೀ ದಿನೇಶ್ ಗುಂಡೂರಾವ್ : ಅನೇಕ ಕಡೆ ಮೂರ್‍ನಾಲ್ಕು ಮನೆಗಳನ್ನು ಮಾಡಿ ಬಾಡಿಗೆಗೆ ಕೊಟ್ಟಿದ್ದಾರೆ. ಸುಮಾರು ಜನ ಅನಧಿಕೃತವಾಗಿ 4–5 ಮನೆಗಳನ್ನು ಮಾಡಿ ಇನ್ನೊಬ್ಬರಿಗೆ ಬಾಡಿಗೆ ಕೊಟ್ಟಿದ್ದಾರೆ. ಅಂಥವರಿಗೆ ಏನು ಮಾಡುತ್ತೀರಿ? ಅನಧಿಕೃತವಾಗಿ ಮನೆ ಮಾಡಿಕೊಂಡು ಅದನ್ನು ಸಂಪಾದನೆಗೆ ಉಪಯೋಗ ಮಾಡುತ್ತಿದ್ದಾರಲ್ಲಾ, ಅಂಥವರಿಗೆ ಏನು ಮಾಡುತ್ತೀರಿ?

(ಗೊಂದಲ)

ಉಪಾಧ್ಯಕ್ಷರು : ಯಾರಾದರು ಒಬ್ಬರು ಮಾತನಾಡಿ.

ಶ್ರೀ ನೆ. ಲ. ನರೇಂದ್ರಬಾಬು : "ಉಳುವವನೇ ಭೂಮಿಯ ಒಡೆಯ" ಎನ್ನುವಂತೆ ಯಾರು ವಾಸ ಮಾಡುತ್ತಿರಾತ್ತಾರೊ ಅವರಿಗೇ ಕೊಡುವುದಾದರೆ ಪರವಾಗಿಲ್ಲ.

ಶ್ರೀ ಸಿ.ಎಸ್.ನಾಡಗೌಡ : ನಾವು ಮಾನ್ಯ ಕಂದಾಯ ಸಚಿವರಿಂದ ಈ ರೀತಿ ನಿರೀಕ್ಷೆ ಮಾಡಿರಲಿಲ್ಲ. It has got vast implications. ಇದರಲ್ಲಿ ಎಷ್ಟು ಗಂಭೀರ ಸ್ವರೂಪವಿದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, "ಅನಧಿಕೃತ ಬಡಾವಣೆಗಳಲ್ಲಿನ ನಿವೇಶನಗಳ ಹಾಗೂ ಅನುಮೋದಿತ ಆದರೆ ಅಭಿವೃದ್ಧಿ ಹೊಂದದ ಬಡಾವಣೆಗಳಲ್ಲಿನ ನಿವೇಶನಗಳು ವಿಶೇಷವಾಗಿ ಬೆಂಗಳೂರು, ಹಾಗೂ ರಾಜ್ಯದ ಇತರ ನಗರಸಭಾ ಪ್ರದೇಶಗಳಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿರುವ ಅಂಥ ಭೂಮಿಗಳ ನೋಂದಣಿಯನ್ನು, ಬಡಾವಣೆಗಳು ಮತ್ತು ನಿವೇಶನಗಳು ಮತ್ತು ಪರಿವರ್ತನೆ ಹೊಂದಿದ ಕೃಷಿ ಭೂಮಿಯಲ್ಲಿದ್ದುದರಿಂದ ನಿಷೇಧಿಸಲಾಗಿತ್ತು" ಎಂದು ಇದೆ. ಹೀಗಿರುವಾಗ 3–5 ಲಕ್ಷ ಮನೆಗಳನ್ನು ಕಟ್ಟಿಕೊಂಡಿದ್ದಾರೆಂದರೆ officials ಏನು ಮಾಡುತ್ತಿದ್ದರು? ಇಲ್ಲಿ ಪ್ರಮುಖವಾ ಗಿರತಕ್ಕದ್ದು ಕಂದಾಯ ಇಲಾಖೆ.

ಉಪಾಧ್ಯಕ್ಷರು : ಅದು ಬಿಲ್ಲಿನಲ್ಲಿರುವ last para ದಲ್ಲಿ layouts developed prior to date ಎಲ್ಲಾ ಹಾಕಿದ್ದಾರೆ. It is very clear. There is no ambiguity. ಈಗ ಲೇಔಟ್ ಬಗ್ಗೆ you read out the last para ಓದಿ.

The last sentence: "all such sites and layouts developed prior to 31.12.2008" It is very clear.

(ಗೊಂದಲ)

ಡಾ: ಹೆಚ್.ಸಿ.ಮಹದೇವಪ್ಪ : ಅಭಿವೃದ್ಧಿಯಾಗಿರುವ ಲೇಔಟ್‌ಗಳ ಬಗ್ಗೆ ತಮ್ಮ ಹತ್ತಿರ ಮಾಹಿತಿಯೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಮಾನ್ಯ ಉಪಾಧ್ಯಕ್ಷರೆ, ಬಡವರನ್ನು, ಮಧ್ಯಮ ವರ್ಗದ ಜನರನ್ನು ಕಣ್ಣುಮುಂದೆ ಇಟ್ಟುಕೊಂಡು ನಾವು ಈ ವಿಧೇಯಕದ ತಿದ್ದುಪಡಿಯನ್ನು ಮಂಡನೆ ಮಾಡಿದ್ದೇವೆ. ಯಾರೋ ಒಬ್ಬ ಸ್ವಂತ land ನ್ನು layout ಮಾಡಿ ಬಡವರಿಗೆ, ಮಧ್ಯಮ ವರ್ಗದವರಿಗೆ ಮಾರಿದ್ದಾನೆ, ಕೆಲವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಮತ್ತೆ ಕೆಲವರು ಶಕ್ತಿ ಇಲ್ಲದೆಯೇ ಮನೆ ಕಟ್ಟಿಕೊಂಡಿಲ್ಲ. ನಾವು ರಸ್ತೆ ಮಾಡಿದ್ದೇವೆ, ಕುಡಿಯುವ ನೀರು ಮತ್ತು ವಿದ್ಯುತ್‌ನ್ನು ಕೊಟ್ಟಿದ್ದೇವೆ. ಅವನು enjoy ಮಾಡುತ್ತಿದ್ದಾನೆ. ಆದರೆ, ಇದು ನನ್ನದು ಎಂಬ ಹಕ್ಕು ಸಿಕ್ಕಿಲ್ಲ. ಆದ್ದರಿಂದ ಈಗ ಅವನಿಗೆ fine ಹಾಕಿ ವಸೂಲಿ ಮಾಡಿ ಇದು ನಿನ್ನದು ಎಂದು confirm ಮಾಡಿಕೊಟ್ಟು ಇನ್ನೂ ಹೆಚ್ಚಿನ ಸವಲತ್ತುಗಳನ್ನು ಕೊಟ್ಟು ಮಾಡುತ್ತಿದ್ದೇವೆ. ಬೆಂಗಳೂರು, ಮೈಸೂರು ಅಥವಾ ಮತ್ತೊಂದು ಕಡೆ ಇರಲಿ ನಮ್ಮ ಕಡೆಯಿಂದ ಈ ಮಧ್ಯಮ ವರ್ಗದ ಜನರಿಗೆ even today 60-70 ವರ್ಷ ವಯಸ್ಸಾಗಿ ಇದು ನನ್ನ ಮನೆ ನನ್ನ ನಿವೇಶನ ಎಂದು ಹೇಳಿಕೊಳ್ಳಲು ಆಗದಿರುವ ಉಸಿರುಕಟ್ಟುವಂಥ ಪರಿಸ್ಥಿತಿ ಈ ನಾಡಿನಲ್ಲಿದೆ. ಅಂಥ ಜನರಿಗೆ one time ಒಂದು date ನಿಗದಿ ಮಾಡಿ ಇನ್ನು ಮುಂದೆ ಈ ರೀತಿ ಆಗುವುದಕ್ಕೆ ನಾವು ಬಿಡುವುದಿಲ್ಲವೆಂದು ಹೇಳಿ ಅವರೇನು ಈಗ conversion fee ಮತ್ತೊಂದು ಮಗದೊಂದು ಏನೂ ಇಲ್ಲದೆಯೇ enjoy ಮಾಡುತ್ತಿದ್ದಾರೆ, ಅವರಿಗೆ fine ಹಾಕಿ ವಸೂಲಿ ಮಾಡುತ್ತಿದ್ದೇವೆ. ನಾವೇನು ಅವರಿಗೆ free ಆಗಿ ಕೊಡುತ್ತಿಲ್ಲ. ನೀವು ಏನೇ ಮಾಡಿದರೂ ಸಹ ಒಂದು 5% ಜನ ಅದರಲ್ಲಿ ಜಾರಿಕೊಂಡು ಲಾಭ ಮಾಡಿಕೊಳ್ಳುವವರು ಇರುತ್ತಾರೆ. ಆದರೆ, ಇದು ಅನಿವಾರ್ಯ. ಬಡವರಿಗೆ ಮತ್ತು ಮಧ್ಯಮ ವರ್ಗದ ಜನರಿಗೋಸ್ಕರ ಇದನ್ನು ಮಾಡುತ್ತಿದ್ದೇವೆ. ಜನರು ಮೆಚ್ಚುತ್ತಾರೆ. ವಿರೋಧ ಪಕ್ಷದ ನಾಯಕರು ಮತ್ತು ನೀವುಗಳೇನು ಸಲಹೆಗಳನ್ನು ಕೊಟ್ಟಿದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡು Rules frame ಮಾಡಬೇಕಾದರೆ ಹೇಗೆ

ಮಾಡಬೇಕು ಎಂಬುದನ್ನು ನೋಡಿಕೊಂಡು ಮಾಡುತ್ತೇವೆ. ದಯಮಾಡಿ ಇದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ : ನನಗಂತೂ ಇದು ಅವರು ಹೇಳುವಷ್ಟು ಸರಳವಾಗಿ ಕಾಣಿಸುತ್ತಿಲ್ಲ. ಅವರ ಉದ್ದೇಶವೇನೊ ನನಗೆ ಗೊತ್ತಿಲ್ಲ. ಅದು ಅಷ್ಟೊಂದು ಸರಳವಾಗಿಲ್ಲ. ಸರಳವಾಗಿದ್ದರೆ ನಾವುಗಳೇಕೆ ವಿರೋಧ ಮಾಡುತ್ತೇವೆ. ಬಡವರು ಮನೆಕಟ್ಟಿಕೊಂಡುಬಿಟ್ಟಿದ್ದಾರೆ, ಅದನ್ನು ಸಕ್ರಮ ಮಾಡಿಕೊಟ್ಟು Penalty ವಸೂಲಿ ಮಾಡುತ್ತೇವೆ, ಅವನ್ನೆಲ್ಲಾ ಒಡೆಯುವುದನ್ನು ನಾವು ಮಾಡಬಾರದು ಎಂದು ಹೇಳಿದ್ದಾರೆ. All right. ಬೆಂಗಳೂರಿನಲ್ಲಿ ಈ ರೀತಿ ಎಷ್ಟು layouts ಇದೆ? How many layouts are there in Bangalore City? Who are behind all these layouts? Whether the owner the of the land or some middle man? is behind. Who is going to be benefited? ಇದು Government land. ವಿಜಯಶ್ರೀಪುರ ಎಂದು ಮೈಸೂರಿನ University ಪಕ್ಕದಲ್ಲಿ ಒಂದು ಲೇಔಟ್ ಆಗಿದೆ. ಅದು ಸುಪ್ರೀಂ ಕೋರ್ಟ್‌ವರೆಗೂ ಹೋಗಿತ್ತು. ಅವರು ಏನು ಮಾಡಿದರೂ ಸಹ ಸುಪ್ರೀಂ ಕೋರ್ಟ್‌ನಲ್ಲಿ ಅವೆಲ್ಲವನ್ನು demolish ಮಾಡಬೇಕೆಂದು Order pass ಆಗಿಬಿಟ್ಟಿದೆ. ಆದರೆ, ಸ್ಟೇ ಅದು ಇದು ತೆಗೆದುಕೊಂಡು ಅದು continue ಆಗುತ್ತಿದೆ. ಅವರೆಲ್ಲಾ ಏನು ಮಾಡಿದ್ದಾರೆಂದರೆ, ಮೂಡಾದಲ್ಲಿ regular ಆಗಿ 50x80, 40x60 ನಿವೇಶನಗಳು ಸಿಗುತ್ತದೆ. ಆ ರೀತಿ ದೊಡ್ಡ ದೊಡ್ಡ ನಿವೇಶನಗಳನ್ನು ಮಾಡಿಕೊಂಡು ಮನೆಗಳನ್ನು ಕಟ್ಟುಕೊಂಡಿದ್ದಾರೆ. Let us say the Supreme Court did not agree to regularize the entire layout. ಅವರು demolish ಮಾಡಿ ಎಂದು order ಕೊಟ್ಟುಬಿಟ್ಟರೆ, ತಾವು ಮೂಡಾದಲ್ಲಿ ಕೇಳಿದರೆ ಎಲ್ಲಾ ಗೊತ್ತಾಗುತ್ತದೆ. It is before the MUDA even today. ಮೂಡಾ ಅಧಿಕಾರಿಗಳು ಅದನ್ನು ಒಡೆಯಬೇಕೆಂದು ಹೇಳುತ್ತಾರೆ, ಅಲ್ಲಿ ಗಲಾಟೆಯಾಗುತ್ತದೆ, ನಾವೂ ಸಹ ಕಾನೂನಿನ ಪ್ರಕಾರ ಏನಾದರೂ ಮಾಡಿ ಎಂದು ಹೇಳುತ್ತೇವೆ, ಅದು ಹಾಗೆಯೇ ಇದೆ. What are you going to do with this? That is a Supreme Court roder Likewise, in so many cases, there are court orders pending before the court. All those things are there. ಅದಕ್ಕೆ my point is,

ಇದನ್ನು ಜಂಟಿ ಸದನದ ಸಮಿತಿಗೆ ಹಾಕಿದರೆ What are you going to lose? ಏನೂ ತೊಂದರೆಯಾಗುವುದಿಲ್ಲ. ಅಲ್ಲೂ ಸಹ ಎರಡೂ ಕಡೆಯವರು ಇರುತ್ತೇವೆ. ಅಲ್ಲಿ ಎಲ್ಲಾ implications ಬಗ್ಗೆ ಚರ್ಚೆ ಮಾಡಿ, ಅಲ್ಲಿ really ಯಾರಾದರೂ ಮೋಸ ಮಾಡುವವರಿದ್ದರೆ, Real estate ನವರಿದ್ದರೆ, ಮೋಸ ಮಾಡುವವರು ಇದ್ದರೆ ಅಂಥದ್ದನ್ನೆಲ್ಲ ನೋಡಿ ಮಾಡಬಹುದಲ್ಲಾ? ಅದನ್ನು ಮಾಡಿ. ಬಡವರು ಮನೆಯನ್ನು ಕಟ್ಟಿಕೊಂಡಿರುವವರಿಗೆ regularize ಮಾಡಲೇಬೇಕು, ಬೇರೆ ದಾರಿ ಇಲ್ಲ. ಅದನ್ನು demolish ಮಾಡುವುದಕ್ಕಾಗುವುದಿಲ್ಲ. ಬಹಳ ಕಷ್ಟದ ಕೆಲಸವಾಗುತ್ತದೆ. Humanity consideration ಮೇಲೆ ಅದನ್ನೆಲ್ಲ ಮಾಡಬೇಕಾಗುತ್ತದೆ. It is a different thing. ನಾವು ಅದನ್ನು ವಿರೋಧ ಮಾಡುವುದೇ ಇಲ್ಲ. The entire Opposition, we are not opposing, the only question is, ರೀತಿ ಇದೆಯಲ್ಲಾ ಅವುಗಳನ್ನೆಲ್ಲ ನೋಡುವುದಕ್ಕೋಸ್ಕರ Joint Select Committeeಗೆ ಒಪ್ಪಿಕೊಳ್ಳಿ. ಇಲ್ಲದಿದ್ದರೆ ನಾಳೆ ದಿವಸ ಜನರೆಲ್ಲರಿಗೂ ನಮಗೆ ಮತ್ತು ನಿಮಗೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಸಾರ್ವಜನಿಕವಾಗಿ ನಾವು ನಾಳೆ ದಿವಸ ಉತ್ತರ ಕೊಡಬೇಕಾದರೆ ಕಷ್ಟವಾಗುತ್ತದೆ. ಆ ಕಾರಣದಿಂದ ನಾವು ಇದನ್ನು ವಿರೋಧ ಮಾಡುತ್ತಿದ್ದೇವೆಯೇ ಹೊರತು ಮನೆ ಕಟ್ಟಿಕೊಂಡಿರುವುದಕ್ಕೆ regularize ಮಾಡಬೇಡಿಯೆಂದು ಹೇಳುವುದಿಲ್ಲ.

ಅಧ್ಯಕ್ಷರು: "2009ರ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು "ಪರ್ಯಾಲೋಚಿಸುವುದು

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಶ್ರೀ ಜಿ. ಕರುಣಾಕರರೆಡ್ಡಿ (ಮಾನ್ಯ ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೆ, ಖಂಡ 2ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

1. "ನಿವಾಸ, ಕೈಗಾರಿಕೆ ಅಥವಾ ವಾಣಿಜ್ಯ ಅಥವಾ ಯಾವುದೇ ಇತರ" ಎಂಬ ಪದಗಳಿಗೆ "ನಿವಾಸದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.
2. ಉಪಖಂಡ (xi) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.
3. (xii) ರಿಂದ (xv) ವರೆಗಿನ ಉಪಖಂಡಗಳಿಗೆ (xi) ರಿಂದ (xiv) ವರೆಗಿನ ಉಪಖಂಡಗಳೆಂದು ಅನುಕ್ರಮವಾಗಿ ಮರುಸಂಖ್ಯೆ ನೀಡತಕ್ಕದ್ದು.
4. (2ಎಎ) ಉಪಖಂಡದಲ್ಲಿ " ಬದಲಾವಣೆ ಅಥವಾ ವ್ಯತ್ಯಾಸವನ್ನು" ಎಂಬ ಪದಗಳ ತರುವಾಯ "ನಿವಾಸದ ಉದ್ದೇಶಕ್ಕಾಗಿ ಮಾತ್ರವೇ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ವಿಧೇಯಕದ 2ನೇ ಖಂಡದಲ್ಲಿ

1. "ನಿವಾಸ, ಕೈಗಾರಿಕೆ ಅಥವಾ ವಾಣಿಜ್ಯ ಅಥವಾ ಯಾವುದೇ ಇತರ" ಎಂಬ ಪದಗಳಿಗೆ "ನಿವಾಸದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.
2. ಉಪಖಂಡ (xi) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.
3. (xii) ರಿಂದ (xv) ವರೆಗಿನ ಉಪಖಂಡಗಳಿಗೆ (xi) ರಿಂದ (xiv) ವರೆಗಿನ ಉಪಖಂಡಗಳೆಂದು ಅನುಕ್ರಮವಾಗಿ ಮರುಸಂಖ್ಯೆ ನೀಡತಕ್ಕದ್ದು.
4. (2ಎಎ) ಉಪಖಂಡದಲ್ಲಿ "ಬದಲಾವಣೆ ಅಥವಾ ವ್ಯತ್ಯಾಸವನ್ನು" ಎಂಬ ಪದಗಳ ತರುವಾಯ " ನಿವಾಸದ ಉದ್ದೇಶಕ್ಕಾಗಿ ಮಾತ್ರವೇ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಸಿದ್ದರಾಮಯ್ಯ : ನಾವು ಇದಕ್ಕೆ ವಿರುದ್ಧವಾಗಿದ್ದೇವೆ. ಯಾರು ಮಧ್ಯವರ್ತಿಗಳಿದ್ದಾರೆ, Real estateಗಳು ಇದ್ದಾರೆ, ಅವರಿಗೆ ಸಹಾಯ ಮಾಡುವುದಕ್ಕೋಸ್ಕರ, ಚುನಾವಣೆಯಲ್ಲಿ ಮತದಾರರನ್ನು ಮೋಸಮಾಡುವುದಕ್ಕೋಸ್ಕರವಾಗಿ, ಅವರನ್ನು ಓಲೈಸಿಕೊಳ್ಳುವುದಕ್ಕೋಸ್ಕರವಾಗಿ, ಯಾರ್ಯಾರು ಕಾನೂನು ಬಾಹಿರವಾಗಿ ಲೇಔಟ್ ಮಾಡುತ್ತಾರೆ, ಅವರಿಗೆ ಸಹಾಯ ಮಾಡುವುದಕ್ಕೋಸ್ಕರವಾಗಿ ಇದನ್ನು ಮಾಡಿದ್ದಾರೆ. ನಾವು ಇದನ್ನು ವಿರೋಧಿಸಿ ಸಭೆಯಿಂದ ಹೊರ ನಡೆಯುತ್ತಿದ್ದೇವೆ.

(ಗೊಂದಲ)

(ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಶಾಸಕರುಗಳು ಸಭೆಯಿಂದ ನಿರ್ಗಮಿಸಿದರು)

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗಿಕರಿಸಲ್ಪಟ್ಟಿತು ಮತ್ತು ಖಂಡ 2 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತ್ತು

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೋಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

(iii) ಕರ್ನಾಟಕ ಆರ್ಥಿಕ ಹೊಣೆಗಾರಿಕೆ(ಎರಡನೇ ತಿದ್ದುಪಡಿ)ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ